2016 ಕ.ತೀ.ವ 783

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ**

# ಶೆಟ್ಟವ್ವ ಹಾಗೂ ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಭೀಮಲ್‌ಖೇಡ್ ಪೋಲೀಸ್ ಠಾಣೆ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 374(2)ರಡಿಯಲ್ಲಿ ಕ್ರಿಮಿನಲ್ ಮೇಲ್ಮನವಿ.

ಭಾರತೀಯ ದಂಡ ಸಂಹಿತೆ 448, 302 ಮತ್ತು 34.

ಮೇಲ್ಮನವಿದಾರರು ಭಾರತ ದಂಡ ಸಂಹಿತೆ ಕಲಂ 34ರ ಜೊತೆಗೋದಿದಂತೆ ಕಲಂ 448 ಹಾಗೂ 302ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುವರೆಂದು ಅಭಿಪ್ರಾಯಪಟ್ಟು ಅವರನ್ನು ಭಾರತ ದಂಡ ಸಂಹಿತೆ ಕಲಂ 302ರಡಿಯಲ್ಲಿ ಆಜೀವ ಕಾರಾಗೃಹ ಶಿಕ್ಷೆಗೆ ಗುರಿಪಡಿಸಿ ಹೊರಡಿಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಮೃತ ವ್ಯಕ್ತಿಯ ಮರಣ ಘೋಷಣಾ ವಿವರಣಾ ಪತ್ರವನ್ನು ಕಾಲ ವಿಳಂಬವಾಗಿ ಮಾಡಿದ್ದಕ್ಕೆ ಸೂಕ್ತ ಕಾರಣವಿಲ್ಲ. ಈ ಕಾರಣದಿಂದ ನಿಶಾನೆ ಪಿ.11ನ್ನು ಅಧಿವಿಚಾರಣಾ ನ್ಯಾಯಾಲಯವು ಸೂಕ್ತವಾಗಿ ಪರಿಗಣಿಸಿರುವುದಿಲ್ಲ. ಸಾಕ್ಷ್ಯಾಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಅಧಿವಿಚಾರಣಾ ನ್ಯಾಯಾಲಯವು ಪ್ರಾ.ಸ. 10, ಪ್ರಾ.ಸ. 11, ಪ್ರಾ.ಸ. 18 ಹಾಗೂ ಪ್ರಾ.ಸ. 20 ಸಾಕ್ಷಿಯನ್ನು ಸರಿಯಾಗಿ ಪರಿಗಣಿಸಿದೆ.

ಮೇಲ್ಮನವಿದಾರರು ಬಡವರು ಮತ್ತು ಮಹಿಳೆಯರಾಗಿದ್ದರಿಂದ ಜುಲ್ಮಾನೆಯನ್ನು 10 ಸಾವಿರ ರೂ.ಗಳಿಂದ 5 ಸಾವಿರ ರೂ.ಗಳಿಗೆ ಇಳಿಸಿ, ಭಾರತ ದಂಡ ಸಂಹಿತೆ ಕಲಂ 448ರಡಿಯಲ್ಲಿ ವಿಧಿಸಿದ ಶಿಕ್ಷೆಯಿಂದ ಕೈಬಿಟ್ಟು ಅವರನ್ನು ಭಾರತ ದಂಡ ಸಂಹಿತೆ

*ಕ್ರಿಮಿನಲ್ ಅಪೀಲು ಸಂಖ್ಯೆ: 3753/2010, ದಿನಾಂಕ: 10ನೇ ಆಗಸ್ಟ್, 2015.

**ಕಲಂ 448 ಹಾಗೂ 302ರಡಿಯಲ್ಲಿ ಶಿಕ್ಷಾರ್ಹರೆಂದು ಅಧಿವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು, ಸದರಿ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಎಐಆರ್ 1988 ಎಸ್‌ಸಿ 2154*
*ಕೃಷ್ಣಗೋಪಾಲ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ (ಉಲ್ಲೇ) 11*
*2. 2012(6) ಎಸ್‌ಸಿಸಿ 710*
*ಲಕ್ಷ್ಮಣ –ವಿರುದ್ಧ– ಮಹಾರಾಷ್ಟ್ರ ರಾಜ್ಯ (ಉಲ್ಲೇ) 14*
*3. 2015(1) ಅಪರಾಧಗಳು 7(ಎಸ್‌ಸಿ)*
*ಕೆ. ರವಿಕುಮಾರ್ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇ) 42*

ಅಪೀಲುದಾರರ ಪರ : ಶ್ರೀ ಮಹಂತೇಶ್ ದೇಸಾಯಿ, ವಕೀಲರು
ಪ್ರತ್ಯಪೀಲುದಾರರ ಪರ: ಶ್ರೀ ಪ್ರಕಾಶ್ ಯೇಲಿ, ಅಡಿಷನಲ್ ಎಸ್‌ಪಿಪಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಪ್ರಸ್ತುತ ಅಪೀಲನ್ನು, ಎಸ್.ಸಿ. 91/08ನ್ನು ಹೊಂದಿರುವ ಸೆಷನ್ಸ್ ಪ್ರಕರಣದಲ್ಲಿ ಹೊರಡಿಸಿದ ಅಪರಾಧ ನಿರ್ಣಯ ಹಾಗೂ ಕಾರಾವಾಸ ಶಿಕ್ಷೆಯ ತೀರ್ಪಿನ ವಿರುದ್ಧ ಹೂಡಲಾಗಿದ್ದು, ಇದು ಬೀದರ್‌ನ ಅಡಿಷನಲ್ ಸೆಷನ್ಸ್ ಕೋರ್ಟ್‌ನ ಮುಂದೆ ಇತ್ಯರ್ಥದಲ್ಲಿತ್ತು. ಇಬ್ಬರೂ ಅಪೀಲುದಾರರನ್ನು ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 448 ಹಾಗೂ 302ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧ ನಿರ್ಣಯ ಮಾಡಲಾಗಿದೆ ಹಾಗೂ ಇಬ್ಬರನ್ನೂ, ಭಾರತ ದಂಡ ಸಂಹಿತೆ, 302ನೇ ಪ್ರಕರಣದ

ಮೇರೆಗೆ ದಂಡನೀಯವಾದ ಅಪರಾಧಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಆಜೀವ ಕಾರಾವಾಸ ಶಿಕ್ಷೆಗೊಳಪಡಿಸಲಾಗಿದೆ ಹಾಗೂ ಪ್ರತಿಯೊಬ್ಬರೂ 10,000/–ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ 3 ತಿಂಗಳವರೆಗಿನ ಸಾದಾ ಕಾರಾವಾಸ ಶಿಕ್ಷೆಗೊಳಪಡಿಸಲು ಹಾಗೂ ಅಲ್ಲದೆ ಪ್ರತಿಯೊಬ್ಬರೂ 3 ತಿಂಗಳುಗಳ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೊಳಪಡಿಸಲು ಮತ್ತು ದಿನಾಂಕ 10.11.2010ರ ತೀರ್ಪಿನ ಪ್ರಕಾರ ಭಾರತ ದಂಡ ಸಂಹಿತೆಯ 448ನೇ ಪ್ರಕರಣದ ಮೇರೆಗೆ ಪ್ರತಿಯೊಬ್ಬರಿಗೂ ದಂಡನೀಯವಾದ ಅಪರಾಧಗಳಿಗಾಗಿ 1,000/– ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಶಿಕ್ಷೆ ವಿಧಿಸಲಾಗಿದೆ.

2. ಪ್ರಸ್ತುತ ಅಪೀಲಿನಲ್ಲಿ ಕೆಲವು ಕಾರಣಗಳನ್ನು ಎತ್ತಲಾಗಿದೆ. ಇಬ್ಬರೂ ಅಪೀಲುದಾರರನ್ನು ಸೆಷನ್ಸ್ ಕೋರ್ಟ್ ಅಪರಾಧಿಗಳೆಂದು ನಿರ್ಣಯ ಮಾಡಿದಾಗಿನಿಂದಲೂ ನ್ಯಾಯಿಕ ಅಭಿರಕ್ಷೆಯಲ್ಲಿದ್ದಾರೆ. ತನಿಖಾ ಹಂತದ ಅವಧಿಯಲ್ಲಿ, ಅಪರಾಧಿಯು ನ್ಯಾಯಿಕ ಅಭಿರಕ್ಷೆಯಲ್ಲಿದ್ದರು ಹಾಗೂ 2.3.2011 ರಂದು ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ದಿನಾಂಕ 25.02.2009ರಂದು ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ಆದೇಶದ ಪ್ರಕಾರ ಜಾಮೀನನ್ನು ವಿಸ್ತರಿಸಲಾಯಿತು.

3. ದೋಷಾರೋಪ ಪಟ್ಟಿಯನ್ನು ಸಲ್ಲಿಸಲು ಕಾರಣವಾದ ಹಾಗೂ ಆನುಷಂಗಿಕ ಅಪರಾಧದ ನಿರ್ಣಯದ ಸಂಗತಿಗಳು ಈ ಮುಂದಿನಂತಿರುತ್ತವೆ:

(ಎ) ಆಪಾದಿತ ಸಂ.1 – ಶ್ರೀಮತಿ ಶೆಟ್ಟವ್ವನು, ಆಪಾದಿತ ಸಂ.2 – ಶ್ರೀಮತಿ ಲಕ್ಷ್ಮಿ ಇವರ ಅತ್ತೆಯಾಗಿದ್ದಾಳೆ. ಅವರು ಬೀದರ್ ಜಿಲ್ಲೆಯಲ್ಲಿರುವ ಹುಮಾನಾಬಾದ್ ತಾಲೂಕಿನ ಭೇಮಲ್‌ಖೇಡ್ ಗ್ರಾಮದ ಖಾಯಂ ನಿವಾಸಿಗಳಾಗಿದ್ದಾರೆ. ಮೃತ ಎಲ್ಲಮ್ಮ ಎಂಬ ಮಹಿಳೆಯು ನಾಗಪ್ಪ ಎಂಬುವರ ಹೆಂಡತಿಯಾಗಿದ್ದು, ತನ್ನ ಮಗನಾದ ಬಾಲಪ್ಪ ಮತ್ತು ಸೊಸೆ ಶ್ರೀಮತಿ ಶೋಭಾ ಹಾಗೂ ಗಂಡ – ನಾಗಪ್ಪನೊಂದಿಗೆ ಅದೇ ಗ್ರಾಮವಾದ ಭೇಮಲ್‌ಖೇಡದಲ್ಲಿ ವಾಸಿಸುತ್ತಿದ್ದು. ಆಪಾದಿತರ ಹಾಗೂ ಮೃತರ ಮನೆಗಳು ಒಂದೇ ಪ್ರದೇಶದಲ್ಲಿವೆ.

(ಬಿ) ಮೃತಳ ಗಂಡ ನಾಗಪ್ಪನವರ ಮನೆಯ ಮುಂದೆ ಹುಣಸೇಮರ ಇತ್ತು. ಆಪಾದಿತರ ವಿರುದ್ಧ ಇರುವ ಆಪಾದನೆಯೇನೆಂದರೆ ಇಬ್ಬರೂ ಆಪಾದಿತರು ದಿನಾಂಕ 18.06.2007ರ ಬೆಳಿಗ್ಗೆ ಸುಮಾರು 10–15 ಗಂಟೆಯಲ್ಲಿ ಸದರಿ ಹುಣಸೆ ಮರವನ್ನು ಕೆಡವಲು ಪ್ರಯತ್ನಿಸಿದ್ದಾರೆ. ಮೃತ ಯಲ್ಲಮ್ಮ ಅಲ್ಲಿಗೆ ಹೋಗಿದ್ದಾಳೆ ಹಾಗೂ ಹುಣಸೆಮರವನ್ನು ಯಾಕೆ ಕಡಿದು ಹಾಕಿದಿರಿ ಎಂದು ಇಬ್ಬರು ಆಪಾದಿತರನ್ನು ಕೇಳಿದ್ದಾಳೆ. ಅವಳ ಪ್ರಶ್ನೆಯಿಂದ ಕೋಪಗೊಂಡಿರುವ ಇಬ್ಬರೂ ಅಪರಾಧಿಗಳು ನಿನಗೆ ಪಾಠ ಕಲಿಸುತ್ತೇವೆ ಎಂದು ಹೆದರಿಸಿದ್ದಾರೆ. ಅಲ್ಲಿಗೆ ಹೋಗಿ ನಿಂತಿದ್ದ ನಾಗಪ್ಪ ಇದನ್ನು ಕೇಳಿಸಿಕೊಂಡ ನಂತರ ಯಲ್ಲಮ್ಮನಿಗೆ ಮನೆಗೆ ಹೋಗಲು ಹೇಳಿದ್ದಾನೆ ಹಾಗೂ ಅದರಂತೆ ಅವಳ ಮನೆಗೆ ಹಿಂತಿರುಗಿದ್ದಾಳೆ. ಕೆಲವು ನಿಮಿಷಗಳೊಳಗೆ ಆಪಾದಿತರು ಯಲ್ಲಮ್ಮನ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿದ್ದಾರೆ ಹಾಗೂ ಆಪಾದಿತ ಸಂ.1 ಎಂದರೆ ಅಪೀಲುದಾರಳು ಯಲ್ಲಮ್ಮನ ಮನೆಯಲ್ಲಿ ಇಟ್ಟಿದ್ದ ಸೀಮೆಎಣ್ಣೆಯನ್ನು ತೆಗೆದುಕೊಂಡು ಅವಳ ಮೇಲೆ ಅದನ್ನು ಸುರಿದಿದ್ದಾಳೆ ಹಾಗೂ 2ನೇ ಆರೋಪಿ ಲಕ್ಷ್ಮಿಯು ಬೆಂಕಿ ಕಡ್ಡಿಯಿಂದ ಯಲ್ಲಮ್ಮನನ್ನು ಹೊತ್ತಿಸಿದ್ದಾಳೆ ಇದರ ಪರಿಣಾಮವಾಗಿ ಸುಟ್ಟುಹೋದ ಕಾರಣದಿಂದ ಕಿರುಚಿಕೊಂಡಿದ್ದಾಳೆ. ಕೂಡಲೇ ಮನೆಯಲ್ಲಿದ್ದ ಯಲ್ಲಮ್ಮನ ಸೊಸೆ ಶ್ರೀಮತಿ ಶೋಭಾ ಮನೆಯಿಂದ ಹೊರಗೆ ಓಡಿಬಂದು ಸಹಾಯಕ್ಕಾಗಿ ಕೂಗಿಕೊಂಡಿದ್ದಾಳೆ.

ಸಿ) ಅವಳು ಕಿರುಚಿಕೊಂಡ ಶಬ್ದ ಕೇಳಿಸಿಕೊಂಡ ಕೂಡಲೇ ಅವಳ ಮಾವ, ನಾಗಪ್ಪ ಹಾಗೂ ಆ ಪ್ರದೇಶದ ನೆರೆಹೊರೆಯವರು ಓಡಿ ಬಂದಿದ್ದಾರೆ ಹಾಗೂ ನೀರನ್ನು ಸುರಿದು ಬೆಂಕಿಯನ್ನು ನಂದಿಸಿದ್ದಾರೆ. ಗಾಯಾಳುವನ್ನು ಕೂಡಲೇ ಭೇಮಲ್‌ಖೇಡದಲ್ಲಿದ್ದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾರೆ ಹಾಗೂ ಗಾಯಾಳುವನ್ನು ಪರೀಕ್ಷಿಸಿದ ವೈದ್ಯರು ಕೂಡಲೇ ಬೀದರ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಅವಳನ್ನು ಸಾಗಿಸಲು ಅವರಿಗೆ ಸೂಚಿಸಿದ್ದಾರೆ. ಈ ನಡುವೆ, ಭೇಮಲ್‌ಖೇಡ ಪೊಲೀಸು ಠಾಣೆಯ ಪೊಲೀಸು ಉಪ ನಿರೀಕ್ಷಕರಿಗೆ, ಒಬ್ಬ ಮಹಿಳೆ ಗಂಭೀರವಾದ ಸುಟ್ಟ ಗಾಯಗಳಿಂದ ಬಳಲುತ್ತಿದ್ದಾರೆಂದು ಹಾಗೂ ಅವಳನ್ನು ಭೇಮಲ್‌ಖೇಡದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಗಿಸಲಾಯಿತೆಂಬ ದೂರವಾಣಿ ಕರೆ ಬಂದಿರುತ್ತದೆ.

ಅವರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಧಾವಿಸಿದ್ದು, ಗಾಯಾಳು ಮಾತಾಡುವ ಸ್ಥಿತಿಯಲ್ಲಿಲ್ಲವೆಂಬುದು ಅವರಿಗೆ ಗೊತ್ತಾಗಿದೆ. ಆದ್ದರಿಂದ ಮಹಿಳಾ ಪೊಲೀಸು ಪೇದೆಯ ನೆರವಿನೊಂದಿಗೆ ಕೂಡಲೇ ಬೀದರ್ ಸರ್ಕಾರಿ ಆಸ್ಪತ್ರೆಗೆ ಅವಳನ್ನು ಕೊಂಡೊಯ್ಯಲಾಗಿತ್ತು.

ಡಿ) ಆಗಿನ ಪೊಲೀಸು ನಿರೀಕ್ಷಕರು ಶ್ರೀ ಮೋಹನ್ ಬೀದರ್‌ಗೆ ಧಾವಿಸಿ ತಹಶೀಲ್ದಾರ್‌ರವರನ್ನು ಎಂದರೆ ತಾಲೂಕು ಕಾರ್ಯ ನಿರ್ವಾಹಕ ದಂಡಾಧಿಕಾರಿ ಬೀದರ್ ಇವರನ್ನು ಸರ್ಕಾರಿ ಆಸ್ಪತ್ರೆ, ಬೀದರ್ ಇಲ್ಲಿ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಕೋರಿದ್ದಾರೆ. ಆದಾದ ತರುವಾಯ ಪೊಲೀಸು ಉಪ ನಿರೀಕ್ಷಕ ಮೋಹನ್‌ರವರು ಮಧ್ಯಾಹ್ನ ಸುಮಾರು 1.30ರೊಳಗೆ ಬೀದರ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರೆಂದು ಹಾಗೂ ಗಾಯಾಳು ಮಾತನಾಡಲು ಸರಿಯಾದ ಸ್ಥಿತಿಯಲ್ಲಿದ್ದಾಳೆಂದು ವೈದ್ಯರು ದೃಢಪಡಿಸಿದರೆಂದು ತಿಳಿಸಿದ್ದಾರೆ. ವೈದ್ಯರ ಸಮ್ಮುಖದಲ್ಲಿ, ದಿನಾಂಕ 18.06.2007ರಂದು ಮಧ್ಯಾಹ್ನ 2.30ರಿಂದ 4.00 ಗಂಟೆಯ ನಡುವೆ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿದೆನೆಂದು ಹಾಗೂ ಪೊಲೀಸು ಠಾಣೆಗೆ ಬಂದು ಭಾರತ ದಂಡ ಸಂಹಿತೆ 448 ಹಾಗೂ 307ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧ ಸಂ.68/07ರಲ್ಲಿ ಪ್ರ.ಮಾ.ವ.(ಎಫ್.ಐ.ಆರ್) ಯನ್ನು ದಾಖಲಿಸಿದೆನೆಂದು ಪೊಲೀಸು ನಿರೀಕ್ಷಕರು ತಿಳಿಸಿದ್ದಾರೆ.

ಇ) ಶ್ರೀಮತಿ ಯಲ್ಲಮ್ಮ, 18.06.2007ರಂದು ರಾತ್ರಿ 8.30ಗಂಟೆಗೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ ಹಾಗೂ ಪತಿ ನಾಗಪ್ಪನಿಂದ ಮಾಹಿತಿಯನ್ನು ಸ್ವೀಕರಿಸಿದ ನಂತರ ಭಾರತ ದಂಡ ಸಂಹಿತೆಯ 302ನೇ ಪ್ರಕರಣವನ್ನು ಸೇರಿಸಿ ಜೆ.ಎಂ.ಎಫ್.ಸಿ. ಗೆ ಹೆಚ್ಚಿನ ವರದಿಯನ್ನು ಸಲ್ಲಿಸಲಾಗಿದೆ.

(ಎಫ್) ಪ್ರಾಸಿಕ್ಯೂಷನ್‌ನ ಪ್ರಕಾರ, ಅಪರಾಧ ನಡೆದಾಗ ಶ್ರೀಮತಿ ಶೋಭಾ ಮನೆಯಲ್ಲಿದ್ದೆನೆಂದು ತಿಳಿಸಿದ್ದಾರೆ. ಮೃತರ ಮಗ ಹಾಗೂ ಶೋಭಾಳ ಪತಿ

ಬೀದರ್ ಆಸ್ಪತ್ರೆಗೆ ಹೋಗಿ ತನ್ನ ತಾಯಿಯೊಂದಿಗೆ ಮಾತನಾಡಿದ ಶ್ರೀ ಬಾಲಪ್ಪ ಅವಳ ಮೇಲೆ ಸೀಮೆ ಎಣ್ಣೆ ಸುರಿದಿರುವ ಹಾಗೂ ಅವಳಿಗೆ ಬೆಂಕಿ ಹಚ್ಚಿರುವ ಆರೋಪಿಯ ಬಗ್ಗೆ ತನಗೆ ಹೇಳಿದಳೆಂದು ತಿಳಿಸಿದ್ದಾನೆ. ಮೃತರ ಪತಿಯಾದ ನಾಗಪ್ಪ, ಗಾಯಾಳುವನ್ನು ಬೀದರ್‌ಗೆ ಸಾಗಿಸಿದ್ದು ಕೊನೆಯುಸಿರೆಳೆದರೆಂದು ತಿಳಿಸಿದ್ದಾರೆ.

4. ಪ್ರಾಸಿಕ್ಯೂಷನ್ನು, ಬೀದರ್‌ನಲ್ಲಿರುವ ಆಸ್ಪತ್ರೆಯಲ್ಲಿ ತಹಸೀಲ್ದಾರ್‌ರವರು ಮಧ್ಯಾಹ್ನ 2.30 ರಿಂದ ಹಾಗೂ 3.00 ಗಂಟೆಯವರೆಗೆ ದಾಖಲಿಸಲಾಗಿದೆಯೆಂದು ತಿಳಿಸಲಾದ ಯಲ್ಲಮ್ಮನ ಮರಣ ಕಾಲೀನ ಹೇಳಿಕೆಯನ್ನು ಅವಲಂಬಿಸಿದೆ. ಇದು ಪ್ರಶ್ನೋತ್ತರದ ರೂಪದಲ್ಲಿದೆ. ತಹಸೀಲ್ದಾರರು ದಾಖಲಿಸಿದ ಮರಣ ಕಾಲೀನ ಹೇಳಿಕೆಯಿರುವ ಲಕೋಟೆಯನ್ನು, ನ್ಯಾಯಾಲಯದ ಮುಂದೆ ತಹಸೀಲ್ದಾರರನ್ನು ವಿಚಾರಣೆ ಮಾಡುವಾಗ ನ್ಯಾಯಾಲಯದಲ್ಲಿ ತೆರೆಯಲಾಗಿತ್ತು.

5. ಹಾಗೆಯೇ ಪ್ರಾಸಿಕ್ಯೂಷನ್ನು ಪ್ರಾ.ಸಾ.11 ಆಗಿ ವಿಚಾರಣೆ ಮಾಡಲಾದ ಶ್ರೀಮತಿ ಶೋಭಾರವರು ಹೇಳಿಕೆ ನೀಡಿರುವುದನ್ನು ಹಾಗೂ ಪ್ರಾ.ಸಾ.10 ಬಾಲಪ್ಪನಿಗೆ ನೀಡಿದ ಯಲ್ಲಮ್ಮನ ಮರಣಕಾಲೀನ ಹೇಳಿಕೆಯನ್ನು, ನಿಶಾನೆ ಪಿ.11 ಪೊಲೀಸು ಉಪ–ನಿರೀಕ್ಷಕ ಮೋಹನ್ ದಾಖಲಿಸಿದ ಯಲ್ಲಮ್ಮನ ಮರಣಕಾಲೀನ ಹೇಳಿಕೆಯನ್ನು ಹಾಗೂ ನಿಶಾನೆ ಪಿ.16 ಬೀದರ್‌ನ ತಹಸೀಲ್ದಾರರು ದಾಖಲಿಸಿದ ಯಲ್ಲಮ್ಮನ ಮರಣಕಾಲೀನ ಹೇಳಿಕೆಯನ್ನು ಮುಖ್ಯವಾಗಿ ಅವಲಂಬಿಸಿದೆ.

6. ಆರೋಪಿಗೆ ಅಪರಾಧವನ್ನು ಮನಗಾಣಿಸುವ ಸಲುವಾಗಿ, ಪ್ರಾಸಿಕ್ಯೂಷನ್ನು ಎಲ್ಲಾ 20 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿ, 6 ಮುಖ್ಯ ವಿಷಯಗಳನ್ನು (ಮುದ್ದೆ ಮಾಲುಗಳನ್ನು) ಗುರುತು ಮಾಡಲಾಯಿತು. ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ವಿಚಾರಣೆ ಮಾಡಲಾಯಿತು. ಅವರು ಪ್ರಾಸಿಕ್ಯೂಷನ್ ವಾದವನ್ನು ಒಟ್ಟಾರೆಯಾಗಿ ನಿರಾಕರಿಸಿದ್ದಾರೆ. ಅವರು, ಬಾಲಪ್ಪನು ಯಲ್ಲಮ್ಮನನ್ನು ತುಂಬಾ ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದ ಹಾಗೂ

ಅವರ ವರ್ತನೆಯಿಂದ ರೋಸಿ ಹೋಗಿ ಅವಳು ತಾನೇ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ, ಯಲ್ಲಮ್ಮ ಹಾಗೂ ಅವಳ ಕುಟುಂಬ ಸದಸ್ಯರ ವಿರುದ್ಧ ಆರೋಪಿಯು ಸಲ್ಲಿಸಿರುವ ಕ್ರಿಮಿನಲ್ ದಾವೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಈ ಪ್ರಕರಣವನ್ನು ತಪ್ಪಾಗಿ ಸಿಕ್ಕಿಸುವ ಪ್ರಯತ್ನ ಮಾಡಿದ್ದಾರೆ.

7. ಆರೋಪಿ – ಅಪೀಲುದಾರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಾಸಿಕ್ಯೂಷನ್ನು ಮುಖ್ಯವಾಗಿ ನಿಶಾನೆ ಪಿ.11 ನಿಶಾನೆ ಪಿ.16ನ್ನು ಅವಲಂಬಿಸಿದೆಯೆಂದು, ಅವರು ಅದೇ ಸಮಯದಲ್ಲಿ ಹೋಗಿರುವುದರಿಂದ ಅವೆರಡೂ ಸಂಶಯಾತ್ಮಕವಾಗಿವೆಯೆಂದು ವಾದಿಸಿದ್ದಾರೆ. ಅಲ್ಲದೆ, ಪ್ರಾಸಿಕ್ಯೂಷನ್ ಸಾಕ್ಷ್ಯ 15 ಆಗಿ ವಿಚಾರಣೆ ಮಾಡಲಾದ ಪೋಲೀಸು ಉಪ – ನಿರೀಕ್ಷಕ – ಮೋಹನ್‌ರವರ ಹೇಳಿಕೆ ಹಾಗೂ ಪ್ರಾ.ಸಾ.18 ಆಗಿ ವಿಚಾರಣೆ ಮಾಡಲಾದ ತಹಶೀಲ್ದಾರ್ ಶ್ರೀಮತಿ ಉಷಾರಾಣಿಯವರ ಹೇಳಿಕೆಯಲ್ಲಿ ಅಸಂಗತತೆ ಇರುವುದು ಕಂಡು ಬರುತ್ತದೆಯೆಂದು ವಾದಿಸಿದ್ದಾರೆ. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಪ್ರಕಾರ, ಶ್ರೀಮತಿ ಶೋಭಾ ಸಾಕ್ಷಿದಾರರನ್ನು ಇರಿಸಿದ್ದಾರೆ ಹಾಗೂ ಆ ಸಮಯದಲ್ಲಿ ಅವಳು ಮನೆಯಲ್ಲಿರುವುದು ಅತೀ ಸಂದೇಹಾಸ್ಪದವಾದುದಾಗಿದೆ ಎಂದೂ ವಾದಿಸಿದ್ದಾರೆ.

8. ಗಾಯದ ತೀವ್ರತೆ ಹಾಗೂ ಗಾಯಾಳುವಿಗೆ ಆಗಿರುವ ಸುಟ್ಟಗಾಯಗಳ ಶೇಕಡಾವಾರನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವಳು ಮಾತನಾಡುವ ಸ್ಥಿತಿಯಲ್ಲಿರಲಿಲ್ಲವೆಂದು ನ್ಯಾಯಾಲಯದ ಗಮನವನ್ನು ಸೆಳೆಯುವ ಪ್ರಯತ್ನ ಮಾಡಲಾಗಿದೆ. ನಿಶಾನೆ.ಪಿ.16ರನ್ನು ಬರೆದಿರುವವರನ್ನು ವಿಚಾರಣೆ ಮಾಡಿಲ್ಲವೆಂದು ವಾದಿಸಿದ್ದಾರೆ ಇದು ನಿಶಾನೆ ಪಿ.16ರ ನೈಜತೆಯ ಬಗ್ಗೆ ಅತಿಯಾದ ಸಂಶಯವನ್ನು ಸೃಷ್ಠಿಸಿದೆ. ಆರೋಪಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಪ್ರಕಾರ, ಪ್ರಾಸಿಕ್ಯೂಷನ್ನು ತನ್ನ ಪಾಲಿಗೆ ಬಂದ ಪ್ರಾರಂಭಿಕ ಹೊಣೆಯನ್ನು ಪ್ರಾಸಿಕ್ಯೂಷನ್ನು ಪರಿಣಾಮಕಾರಿಯಾಗಿ ನಿಭಾಯಿಸಿಲ್ಲ. ಆದ್ದರಿಂದ ಪ್ರಾಸಿಕ್ಯೂಷನ್ನು ಎಲ್ಲಾ ಯುಕ್ತ

ಸಂದೇಹವನ್ನು ಮೀರಿ ಆರೋಪಿಯ ಅಪರಾಧವನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆಯೆಂದು ವಾದಿಸಿದ್ದಾರೆ.

9. ಮತ್ತೊಂದು ಕಡೆಯಲ್ಲಿ, ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರಾದ (ಎಸ್‌ಪಿಪಿ) ಶ್ರೀ ಯೆಲಿ ಅವರು ನಿಶಾನೆ ಪಿ.16ನ್ನು ಹಿತಾಸಕ್ತಿ ಇರದ ಸಾಕ್ಷಿದಾರರೂ ಆದ ಶ್ರೀಮತಿ ಉಷಾರಾಣಿ ಆಸ್ಪತ್ರೆಯಲ್ಲೇ ವೈದ್ಯರ ಸಮ್ಮುಖದಲ್ಲೇ ಸಿದ್ದಪಡಿಸಿದ್ದಾರೆಂದು ವಾದಿಸಿದ್ದಾರೆ. ಆದ್ದರಿಂದ ಇದರ ಮೇಲಿನ ನಂಬಿಕೆ ಅನುಮಾನ ಪಡುವಂಥದ್ದಲ್ಲವೆಂದು ವಾದಿಸಿದ್ದಾರೆ. ಅವರ ಪ್ರಕಾರ ಶ್ರೀಮತಿ ಶೋಭಾ ಹಾಗೂ ಬಾಲಪ್ಪನವರ ಸಾಕ್ಷ್ಯವು ನ್ಯಾಯಾಲಯದ ಗಮನದಲ್ಲಿ ನಂಬಿಕೆಯನ್ನು ಉಳಿಸಿಕೊಂಡಿದೆ. ಅವರ ಪ್ರಕಾರ, ಡಾ॥ ಸುಧೀರ್‌ರವರ ಸಾಕ್ಷ್ಯವು, ಶೇ.95ರಷ್ಟು ಸುಟ್ಟಗಾಯಗಳಾಗಿದ್ದರೂ, ಗಾಯಾಳುವಿಗೆ ಪ್ರಜ್ಞೆ ಇತ್ತೆಂದು, ಮಾತನಾಡಲು ಶಕ್ತರಾಗಿದ್ದರೆಂದು ತೋರಿಸಿದ್ದಾರೆ. ಆದ್ದರಿಂದ ಇದು ಅಧಿವಿಚಾರಣಾ ನ್ಯಾಯಾಲಯವನ್ನು ಆಧರಿಸಿದೆ. ಅಲ್ಲದೆ ಅವರು, ಅಸಂಗತತೆಗಳು ಇಲ್ಲಿ ಕಂಡು ಬಂದಿವೆ ಹಾಗೂ ಸ್ವರೂಪದಲ್ಲಿ ಅಲ್ಪವಾಗಿದ್ದು ಪ್ರಾಸಿಕ್ಯೂಷನ್‌ನ ಮುಖ್ಯ ವಸ್ತುವಿಗೆ ಬಾಧಕವಾಗಿಲ್ಲ ಹಾಗಾಗಿ ಉಳಿದಂತೆ ಅದನ್ನು ಒಪ್ಪಿಕೊಳ್ಳಬಹುದಾಗಿದೆ.

10. ದಾಖಲೆಗಳನ್ನು ಆದ್ಯಂತವಾಗಿ ಪರಿಶೀಲಿಸಿ, ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ಈ ನ್ಯಾಯಾಲಯದ ಪರಿಗಣನೆಗೆ ಈ ಮುಂದಿನ ಪ್ರಶ್ನೆಗಳು ಉದ್ಭವಿಸುತ್ತವೆ:

1) ಪೊಲೀಸು ಉಪ–ನಿರೀಕ್ಷಕ ಮೋಹನ್ ದಾಖಲಿಸಿರುವರೆಂದು ಹೇಳಲಾಗಿರುವ ಮೃತ ಎಲ್ಲಮ್ಮನ ಮರಣಕಾಲೀನ ಹೇಳಿಕೆ ಆಧರಿಸಿರುವ ನಿಶಾನೆ ಪಿ.11ನ್ನು ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿಸಿದೆಯೇ?

2) ಅಧಿವಿಚಾರಣಾ ನ್ಯಾಯಾಲಯವು ಪ್ರಾ.ಸಾ.10 ಬಾಲಪ್ಪ ಹಾಗೂ ಪ್ರಾ.ಸಾ.11 ಶೋಭಾ, ಪ್ರಾ.ಸಾ.18 ಉಷಾರಾಣಿ ಹಾಗೂ ಪ್ರಾ.ಸಾ.20

ಡಾ॥ ಸುಧೀರ್ ಹಾಗೂ ನಿಶಾನೆ ಪಿ.16ನ್ನು ಆಧರಿಸಿದ ಸಾಕ್ಷ್ಯವನ್ನು ಸಮರ್ಥಿಸಿದೆಯೆ?

3) ಅಧಿವಿಚಾರಣಾ ನ್ಯಾಯಾಲಯವು ಭಾರತೀಯ ದಂಡ ಸಂಹಿತೆಯ 448ನೇ ಪ್ರಕರಣ ಹಾಗೂ ಭಾರತೀಯ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆರೋಪಿಗಳ ಅಪರಾಧ ನಿರ್ಣಯ ಮಾಡುವುದನ್ನು ಸಮರ್ಥಿಸಿದೆಯೇ?

4) ಕಾರಾವಾಸ ಶಿಕ್ಷೆ ಮತ್ತು ಜುಲ್ಮಾನೆಯಷ್ಟರಮಟ್ಟಿಗೆ ಆರೋಪಿಗೆ ಯಾವುದೇ ವಿನಾಯಿತಿಯನ್ನು ತೋರಿಸಬಹುದಾಗಿದೆಯೇ, ಹಾಗಿದ್ದರೆ ಅದರ ಅವಧಿ ಎಷ್ಟು?

## ಕಾರಣಗಳು

11. **ವಿವಾದಾಂಶ ಸಂ.(1):** ಕ್ರಿಮಿನಲ್ ದಾವೆಯಲ್ಲಿ ಅಗತ್ಯಪಡಿಸಲಾದ ರುಜುವಾತಿನ ಪ್ರಮಾಣವು ಎಲ್ಲಾ ಯುಕ್ತ ಸಂಶಯವನ್ನು ಮೀರಿದ ಒಂದು ರುಜುವಾತಾಗಿದೆ. ಯುಕ್ತ ಸಂಶಯವನ್ನು ಮೀರಿದ ರುಜುವಾತು ಯಾವುದು ಎಂಬುದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಕೃಷ್ಣಗೋಪಾಲ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ1*** ಪ್ರಕರಣದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದೆ. ಸದರಿ ನಿರ್ಣಯದ ಕಂಡಿಕೆ 13 ಇದಕ್ಕೆ ಸಂಬಂಧಪಡುತ್ತದೆ ಹಾಗೂ ಇದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

> ‘ಸಂದೇಹಗಳು ಸ್ವಲ್ಪಮಟ್ಟಿನ ಊಹಾತ್ಮಕವಾದ ಆಸಕ್ತಿ ಕೆರಳಿಸದಿದ್ದರೆ ಅವುಗಳನ್ನು ಯುಕ್ತವಾದವುಗಳೆಂದು

1. ಎಐಆರ್ 1988 ಎಸ್‌ಸಿ 2154

ಕರೆಯಲಾಗುವುದು. ಕಾನೂನು, ಸತ್ಯವನ್ನು ಬಿಟ್ಟು ಬೇರಾವುದೇ ಪಕ್ಷಪಾತವನ್ನು ಹೊಂದಿರುವುದಿಲ್ಲ. ಯುಕ್ತ ಸಂದೇಹವನ್ನು ಹುಟ್ಟಿಸುವ ಅತಿಯಾದ ಭಾವನಾತ್ಮಕ ಪ್ರತಿಕ್ರಿಯೆ ಇರಬಾರದು. ಸಾಕ್ಷ್ಯದಿಂದ ಉಂಟಾದ ಆರೋಪಿತ ವ್ಯಕ್ತಿಗಳ ತಪ್ಪಿಗೆ ಸಂಬಂಧಿಸಿದ ಸಂದೇಹಗಳು, ಅಥವಾ ಅವುಗಳು ಇರದಿದ್ದಲ್ಲಿ ಅಸ್ಪಷ್ಟ ಗ್ರಹಿಕೆಯಿಂದ ವೈದೃಶ್ಯವಾದಂಥ ಸಂದೇಹಗಳು ವಾಸ್ತವಿಕವಾಗಿರಬೇಕು ಹಾಗೂ ಗಣನೀಯವಾಗಿರಬೇಕು. ಯುಕ್ತವಾದ ಸಂದೇಹ ಊಹಾತ್ಮಕವಾಗಿರುವುದಿಲ್ಲ. ಕ್ಷುಲ್ಲಕವಾಗಿರುವುದಿಲ್ಲ ಅಥವಾ ಸುಮ್ಮನೆ ಊಹಿಸಬಹುದಾದ ಸಂದೇಹವಾಗಿರುವುದಿಲ್ಲ, ಆದರೆ ಸರಿಯಾದ ಸಂದೇಹ ಕಾರಣವನ್ನು ಆಧರಿಸಿರುತ್ತದೆ ಹಾಗೂ ಸಾಮಾನ್ಯ ಜ್ಞಾನದಿಂದ ಕೂಡಿರುತ್ತದೆ. ಪ್ರಕರಣದ ಸಾಕ್ಷ್ಯದಿಂದ ಅದು ಹುಟ್ಟಿಬಂದಿರುತ್ತದೆ.

ಸಾಧ್ಯತೆಯ ಪರಿಕಲ್ಪನೆಗಳು, ಹಾಗೂ ಅದರ ಮಟ್ಟವನ್ನು, ಯುಕ್ತ ಸಂದೇಹವನ್ನು ಮೀರಿ ಇಡಲಾದ ರುಜುವಾತು ಎಷ್ಟು ಪ್ರಮಾಣದಲ್ಲಿದೆ ಎಂಬುದನ್ನು ಕರಾರುವಾಕ್ಕಾಗಿ ಅಂದಾಜು ಮಾಡಲಾದ ಪ್ರಮಾಣದ ಆಧಾರದ ಮೇಲೆ ಸ್ಪಷ್ಟವಾಗಿ ವ್ಯಕ್ತಪಡಿಸಲಾಗುವುದಿಲ್ಲ. ರುಜುವಾತಿನ ಸಾಧ್ಯತೆ ಹಾಗೂ ಪ್ರಮಾಣದ ಮಟ್ಟದ ಮೌಲ್ಯಮಾಪನ ಮಾಡುವಲ್ಲಿ ಸ್ಪಷ್ಟ ವಸ್ತುನಿಷ್ಠ ಅಂಶ ಇರುತ್ತದೆ. ಕಡೇ ವಿಶ್ಲೇಷಣೆಯಲ್ಲಿ, ಸ್ಪಷ್ಟವಾದ ಸಾಮಾನ್ಯ ಜ್ಞಾನ ಹಾಗೂ ಅಂತಿಮವಾಗಿ, ನ್ಯಾಯಾಧೀಶರ ಸೂಕ್ಷ್ಮವಾದ ಪ್ರತ್ಯಕ್ಷ ಅರಿವು ವಿಧಿವಿಜ್ಞಾನ ಸಾಧ್ಯತೆಯಲ್ಲಿರಬೇಕಾಗುತ್ತದೆ. ಆಪಾದಿತ ವ್ಯಕ್ತಿಗೆ ಕ್ರಿಮಿನಲ್ ಪ್ರಕ್ರಿಯೆಯು ನೀಡಿದ ಸಂರಕ್ಷಣೆಯು ಮುಗಿದಾಗ ಅದೇ ಸಮಯದಲ್ಲಿ, ಅಲ್ಪವಾದ ಕಾನೂನನ್ನು ಅರಿಯದಿರುವುದು, ಕ್ರಿಮಿನಲ್ ನ್ಯಾಯದ ಆಡಳಿತದ ಅಪಹಾಸ್ಯ ಮಾಡಿದಂತಾಗುತ್ತದೆ'.

12. ನಿಶಾನೆ ಪಿ.11, ವೈದ್ಯರ ಸಮ್ಮುಖದಲ್ಲಿ ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಮಧ್ಯಾಹ್ನ 2.30 ಹಾಗೂ 4.00 ಗಂಟೆಯ ನಡುವೆ ಪೊಲೀಸು ಉಪ–ನಿರೀಕ್ಷಕ ಮೋಹನ್‌ರವರು ದಾಖಲಿಸಿರುವರೆಂದು ಹೇಳಲಾದ ಮೃತ ಯಲ್ಲಮ್ಮನ ಮರಣ ಕಾಲೀನ ಹೇಳಿಕೆಯಾಗಿದೆಯೆಂಬುದನ್ನು ತಿಳಿಸುತ್ತದೆ. ಪ್ರಾಸಿಕ್ಯೂಷನ್ ಪ್ರಕಾರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದ ಮೇರೆಗೆ ಇದು ಸಹ ಮೊದಲ ಮಾಹಿತಿಯಾಗಿರುತ್ತದೆ. ಈ ನಿಶಾನೆ ಪಿ.11ರ ಆಧಾರದ ಮೇಲೆ, ಪೊಲೀಸು ಉಪ–ನಿರೀಕ್ಷಕರು ದಿನಾಂಕ 18.6.2007ರಂದು ಸಾಯಂಕಾಲ ಸುಮಾರು 6.15ರಲ್ಲಿ ಇಬ್ಬರೂ ಅಪೀಲುದಾರರ ವಿರುದ್ಧ ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 448 ಹಾಗೂ 307ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧ ಸಂ.58/078ರಲ್ಲಿ ಪ್ರಕರಣವನ್ನು ದಾಖಲಿಸಲು ನಿರ್ಧರಿಸಿದ್ದಾರೆ. ಮರಣ ಕಾಲೀನ ಹೇಳಿಕೆಯಾಗಿರುವ ನಿಶಾನೆ. ಪಿ.11 ಪ್ರಥಮ ಮಾಹಿತಿಯಾಗಿದ್ದು, ನಿಶಾನೆ ಪಿ.12, ಪ್ರಥಮ ಮಾಹಿತಿ ವರದಿಯನ್ನು, ಜೆ.ಎಂ.ಎಫ್.ಸಿ. ಹುಮನಾಬಾದ್ ಮುಂದೆ ಇಡಲು ಸಾಯಂಕಾಲ ಸುಮಾರು 7.15ರ ಹೊತ್ತಿಗೆ ಪಿ.ಸಿ. 931 ಇವರಿಗೆ ಹಸ್ತಾಂತರಿಸಲಾಗಿತ್ತು. ಇದರ ಪರಿಣಾಮವಾಗಿ, ನಿಶಾನೆ ಪಿ.12 ಪ್ರಥಮ ಮಾಹಿತಿ ವರದಿಯ ಅಂಕಣ ಸಂ.13ರಲ್ಲಿ ಟಿಪ್ಪಣಿಯನ್ನು ಮಾಡಲಾಯಿತು. ನಿಶಾನೆ ಪಿ.11 ಹಾಗೂ ನಿಶಾನೆ ಪಿ.12 ಇವೆರಡನ್ನೂ ಮಧ್ಯರಾತ್ರಿ 12ರ ಹೊತ್ತಿಗೆ ಜೆ.ಎಂ.ಎಫ್.ಸಿ ಹುಮನಾಬಾದ್ ಮುಂದೆ ಇರಿಸಲಾಯಿತು. ನಿಶಾನೆ ಪಿ.12ರಲ್ಲಿ ಜೆ.ಎಂ.ಎಫ್.ಸಿ.ಯು ನೀಡಿದ ಹಿಂಬರಹವು ಈ ಮುಂದಿನಂತಿದೆ:

> ‘18/19.6.2007 ರಂದು ಮಧ್ಯರಾತ್ರಿ 12 ಗಂಟೆಯಲ್ಲಿ ಒಂದು ಅನುಬಂಧದೊಂದಿಗೆ ಪೊಲೀಸು ಪೇದೆ 931ರವರ ಮೂಲಕ ಸ್ವೀಕರಿಸಲಾಗಿದೆ.’
>
> ಸಹಿ/–
>
> 18/19.6.2007

13. ಗಾಯಾಳು ಯಲ್ಲಮ್ಮನ ಮರಣದ ಹಿನ್ನಲೆಯಲ್ಲಿ ನಿಶಾನೆ ಪಿ.11 ಪ್ರಥಮ ಮಾಹಿತಿ ವರದಿಯು ಈಗ ಭಾರತ ಸಾಕ್ಷ್ಯ ಅಧಿನಿಯಮದ 32ನೇ ಪ್ರಕರಣದ ಮೇರೆಗೆ ಒಪ್ಪಿಕೊಳ್ಳಬಹುದಾದ ಮರಣಕಾಲೀನ ಹೇಳಿಕೆಯಾಗಿದೆ. ಸ್ಥಿರಪಡಿಸದ ಮರಣ ಕಾಲೀನ ಹೇಳಿಕೆಯು ಅಪರಾಧ ನಿರ್ಣಯವನ್ನು ಆಧರಿಸುತ್ತದೆ. ಎಚ್ಚರಿಕೆ ಪತ್ರದಲ್ಲಿ ಮರಣಕಾಲೀನ ಹೇಳಿಕೆಗೆ ಸಂಬಂಧಿಸಿದ ಸಾಕ್ಷ್ಯವನ್ನು ಬೋಧಿಸಿರುವ ಅಥವಾ ಸೃಜಿಸಿವ ಸಾಧ್ಯತೆಯನ್ನು ತಳ್ಳಿಹಾಕುವ ಸಲುವಾಗಿ ಎಚ್ಚರದಿಂದ ನಿರ್ಧರಿಸಬೇಕು ಎಂಬುದನ್ನು ಸೇರಿಸಲಾಗಿದೆ. ಈ ನಿಶಾನೆ ಪಿ.11ನ್ನು ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ, ಸದರಿ ಆಸ್ಪತ್ರೆಯ ವೈದ್ಯರ ಸಮ್ಮುಖದಲ್ಲಿ ಮಧ್ಯಾಹ್ನ 2.30 ಹಾಗೂ 4.00 ಗಂಟೆಯ ನಡುವೆ ಪೊಲೀಸು ಉಪ–ನಿರೀಕ್ಷಕ ಬಿ. ಮೋಹನ್‌ರವರು ದಾಖಲಿಸಿದ್ದಾರೆಂದು ತಿಳಿಸಲಾಗಿದೆ. ನಿಶಾನೆ ಪಿ.11 ಕನ್ನಡದಲ್ಲಿದ್ದು ಯಲ್ಲಮ್ಮನು ವಿವರಿಸಿರುವುದಾಗಿದೆ ಹಾಗೂ ಪೊಲೀಸು ಉಪ ನಿರೀಕ್ಷಕ ಮೋಹನ್‌ರವರ ಸಹಿ ಇರುತ್ತದೆ.

14. ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರು ಈ ನ್ಯಾಯಾಲಯದ ಮುಂದೆ, ಘೋಷಣಾಕಾರನ ಮಾನಸಿಕ ದಾರ್ಢ್ಯತೆ ಬಗ್ಗೆ ವೈದ್ಯರು ನೀಡಿದ ದೃಢೀಕರಣವು ಮರಣಕಾಲೀನ ಹೇಳಿಕೆಯ ಅಧಿಕೃತತೆಯನ್ನು ನೀಡುವ ಸ್ಥಿತಿಯಲ್ಲಿಲ್ಲವೆಂದು ವಾದಿಸಿದ್ದಾರೆ. ಅಂಥ ಘೋಷಣೆಯ ಸಾಕ್ಷ್ಯದ ಮೌಲ್ಯವು ನಿರ್ದಿಷ್ಟ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಅವಲಂಬಿಸುತ್ತದೆಯೆಂದು ವಾದಿಸಿದ್ದಾರೆ. ಅವರು ***ಲಕ್ಷ್ಮಣ ವಿ. ಮಹಾರಾಷ್ಟ್ರ ರಾಜ್ಯ***[2], ಪ್ರಕರಣದಲ್ಲಿ ನೀಡಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠದ ನಿರ್ಣಯವನ್ನು ಅವಲಂಬಿಸಿದ್ದಾರೆ. ಸದರಿ ನಿರ್ಣಯದ 3ನೇ ಕಂಡಿಕೆಯಲ್ಲಿ ಸಂಬಂಧಪಟ್ಟ ಅಭಿಪ್ರಾಯ ಕಂಡುಬರುತ್ತದೆ ಹಾಗೂ ಅದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

> ''ಮರಣ ಕಾಲೀನ ಹೇಳಿಕೆಯನ್ನು ಒಪ್ಪಿಕೊಳ್ಳುವುದಕ್ಕೆ ಸಂಬಂಧಿಸಿದಂಥ ನ್ಯಾಯಶಾಸ್ತ್ರಜ್ಞರ ಸಿದ್ಧಾಂತವು, ಪಕ್ಷಕಾರರು

2. 2012(6) ಎಸ್‌ಸಿಸಿ 710

ಮರಣಶಯ್ಯೆಯಲ್ಲಿರುವಾಗ ಹಾಗೂ ಈ ಜಗತ್ತಿನಲ್ಲಿ ಉಳಿಯುವ ಪ್ರತಿಯೊಂದು ಭರವಸೆಯನ್ನು ಕಳೆದುಕೊಂಡಿದ್ದಾಗ, ಪ್ರತಿಯೊಂದು ಸುಳ್ಳಿನ ಮಾತು ಇಲ್ಲವಾದಾಗ ಅಂಥ ಘೋಷಣೆಯನ್ನು ಕಟ್ಟ ಕಡೆಯಲ್ಲಿ ಮಾಡುವಂಥದಾಗಿರುತ್ತದೆ ಹಾಗೂ ಮನುಷ್ಯನು ಸತ್ಯವನ್ನು ಮಾತ್ರ ಮಾತನಾಡುವ ಅತೀ ಪ್ರಬಲವಾದ ಚಿಂತನೆಯಿಂದ ಪ್ರೇರೇಪಿತನಾಗುತ್ತಾನೆ. ಇದರಲ್ಲಿ ಏನೇ ಇದ್ದರೂ, ತಮ್ಮ ಸತ್ಯಕ್ಕೆ ತೊಂದರೆಯಾಗಬಹುದಾದ ಹಲವಾರು ಸನ್ನಿವೇಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಸಾಕ್ಷ್ಯದ ಈ ರೀತಿಗಳಿಗೆ ನೀಡುವ ಪ್ರಾಧಾನ್ಯತೆಯನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಅಪಾರವಾದ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಮನುಷ್ಯನು ಮರಣ ಶಯ್ಯೆಯಲ್ಲಿರುವ ಸಂದರ್ಭದಲ್ಲಿ ಹಾಗೆಯೇ ವಿಚಿತ್ರ ರೀತಿಯ ಭಯ ಹೊಂದಿರುತ್ತಾನೆ ಹಾಗೂ ನಿರುಮ್ಮಳನಾಗಿರುತ್ತಾನೆ. ಅವನ ಹೇಳಿಕೆಯ ನಿಖರತೆಯನ್ನು ಒಪ್ಪಿಕೊಳ್ಳಲು ಕಾನೂನಿನಲ್ಲಿ ಕಾರಣವಿದೆ. ಪ್ರಮಾಣವಚನದ ಅಗತ್ಯತೆಯು ಈ ಕಾರಣಕ್ಕಾಗಿ ಇದೆ ಹಾಗೂ ಪಾಟೀಸವಾಲನ್ನು ಇದರೊಂದಿಗೆ ಮಾಡಲಾಗುವುದು. ಆರೋಪಿಗೆ ಪಾಟೀಸವಾಲನ್ನು ಮಾಡುವ ಅಧಿಕಾರ ಇಲ್ಲದಿರುವುದರಿಂದ ನ್ಯಾಯಾಲಯಗಳು, ತಮ್ಮ ವಾಸ್ತವವಾದ ಹಾಗೂ ನಿಜವಾದ ಸಂಪೂರ್ಣ ಭರವಸೆ ಹೊಂದಿರುವ ಸಂಬಂಧ್ ಮರಣ ಕಾಲೀನ ಹೇಳಿಕೆಯು ಅಂಥ ಸ್ವರೂಪದ್ದಾಗಿರಬೇಕೆಂದು ಒತ್ತಿ ಹೇಳುತ್ತದೆ. ಆದಾಗ್ಯೂ ನ್ಯಾಯಾಲಯವು, ಯಾವಾಗಲೂ ಬೋಧಿಸಬೇಕಾಗುತ್ತದೆ ಅಥವಾ ಸಲಹೆ ಕೊಡಬೇಕಾಗುತ್ತದೆ ಅಥವಾ ಕಲ್ಪನೆಯ ವಸ್ತುವಾಗಿರಬೇಕಾಗುತ್ತದೆ. ಮೃತ ವ್ಯಕ್ತಿಯು ಯುಕ್ತ ಮಾನಸಿಕ ಸ್ಥಿತಿಯಲ್ಲಿದ್ದನು ಹಾಗೂ ಅವಕಾಶ ಹೊಂದಿದ್ದನು ಹಾಗೂ ಆಕ್ರಮಣಕಾರನನ್ನು ಗಮನಿಸುವ ಹಾಗೂ ಗುರುತಿಸುವ ಸಂದರ್ಭ ಇತ್ತೆಂಬುದನ್ನು ನ್ಯಾಯಾಲಯವು ಮತ್ತೆ ನಿರ್ಧರಿಸಬೇಕು. ಆದ್ದರಿಂದ ಸಾಮಾನ್ಯವಾಗಿ ನ್ಯಾಯಾಲಯವು, ಮೃತನು ಮರಣ ಕಾಲೀನ

ಹೇಳಿಕೆಯನ್ನು ನೀಡುವ ಯುಕ್ತ ಮಾನಸಿಕ ಸ್ಥಿತಿ ಹೊಂದಿದ್ದನೇ ಎಂಬುದನ್ನು ಮನಗಾಣುವ ಸಲುವಾಗಿ ವೈದ್ಯಕೀಯ ಅಭಿಪ್ರಾಯವನ್ನು ಅವಲೋಕಿಸುತ್ತದೆ. ಆದರೆ ಪ್ರತ್ಯಕ್ಷ ಸಾಕ್ಷಿದಾರರು ಮೃತನು ಘೋಷಣೆಯನ್ನು ಮಾಡುವ ಯುಕ್ತ ಹಾಗೂ ಪ್ರಜ್ಞಾ ಮಾನಸಿಕ ಸ್ಥಿತಿಯಲ್ಲಿದ್ದನೆಂದು ತಿಳಿಸಿದಲ್ಲಿ, ವೈದ್ಯಕೀಯ ಅಭಿಪ್ರಾಯವು ಹೆಚ್ಚು ಪ್ರಾಧಾನ್ಯ ಪಡೆದುಕೊಳ್ಳುವುದಿಲ್ಲ. ಘೋಷಣಾಕಾರನ ಮನೋದಾರ್ಢ್ಯದ ಬಗ್ಗೆ ವೈದ್ಯರು ದೃಢೀಕರಿಸದಿರುವುದರಿಂದ, ಮರಣಕಾಲೀನ ಹೇಳಿಕೆಯನ್ನು ಅಂಗೀಕರಿಸಿಲ್ಲವೆಂದು ಹೇಳಲು ಸಹ ಸಾಧ್ಯವಿಲ್ಲ. ಮರಣಕಾಲೀನ ಹೇಳಿಕೆಯು ಮೌಖಿಕವಾಗಿರಬಹುದು ಅಥವಾ ಲಿಖಿತವಾಗಿರಬಹುದು ಹಾಗೂ ಮಾತುಗಳ ಮೂಲಕವಾಗಿರಲಿ ಅಥವಾ ಸಂಕೇತ ರೂಪದಲ್ಲಿರಲಿ ಅಥವಾ ಬೇರೆ ರೀತಿಯಲ್ಲಿರಲಿ ಅದು ಯಾವುದೇ ಯುಕ್ತ ಅಭಿವ್ಯಕ್ತಿ ರೂಪದಲ್ಲಿರಬೇಕು. ನೀಡುವ ಸೂಚನೆ ಸಕಾರಾತ್ಮಕ ಹಾಗೂ ಕರಾರುವಾಕ್ಕಾಗಿದ್ದರೆ ಸಾಕು. ಹಲವು ಪ್ರಕರಣಗಳಲ್ಲಿ, ಅಂಥ ಹೇಳಿಕೆಗಳನ್ನು ಮರಣ ಸಂಭವಿಸುವ ಮೊದಲು ಬಾಯಿಮಾತಿನಲ್ಲಿ ನೀಡಿರುತ್ತಾರೆ ಹಾಗೂ ದಂಡಾಧಿಕಾರಿ ಅಥವಾ ವೈದ್ಯ ಅಥವಾ ಪೊಲೀಸು ಅಧಿಕಾರಿಯಂಥ ಯಾರೋ ಒಬ್ಬರು ಅದನ್ನು ಬರವಣಿಗೆಗೆ ಇಳಿಸುತ್ತಾರೆ. ಇದನ್ನು ದಾಖಲಿಸುವಾಗ, ಯಾವುದೇ ಪ್ರಮಾಣವಚನದ ಅಗತ್ಯತೆಯಾಗಲಿ ಅಥವಾ ದಂಡಾಧಿಕಾರಿಯವರ ಹಾಜರಿಯ ಅಗತ್ಯತೆಯಿರುವುದಿಲ್ಲ. ನಿಜವಾಗಿ ದಂಡಾಧಿಕಾರಿಯವರ ಅಗತ್ಯತೆಯಿದ್ದರೆ ಇದಕ್ಕೆ ಅಧಿಕೃತತೆಯನ್ನು ನೀಡಬೇಕಿದ್ದರೂ ಸಹ ಸಾಯುವ ವ್ಯಕ್ತಿಯ ಹೇಳಿಕೆಯನ್ನು ದಾಖಲಿಸಲು ಲಭ್ಯವಿದ್ದರೆ, ದಂಡಾಧಿಕಾರಿಯವರಿಗೆ ಸಾಮಾನ್ಯವಾಗಿ ಕರೆಯನ್ನು ಮಾಡುವುದು, ಮರಣಕಾಲೀನ ಹೇಳಿಕೆಯನ್ನು ದಂಡಾಧಿಕಾರಿಯವರು ಅಗತ್ಯವಾಗಿ ಮಾಡಲೇಬೇಕು ಎಂದು ಕಾನೂನು ಅಗತ್ಯಪಡಿಸುವುದಿಲ್ಲ ಹಾಗೂ ಅಂಥ ಹೇಳಿಕೆಯನ್ನು ದಂಡಾಧಿಕಾರಿಯವರು ದಾಖಲಿಸುವಾಗ ಅಂಥ

> ದಾಖಲೆ ಮಾಡಲು ಯಾವುದೇ ನಿರ್ದಿಷ್ಟ ಶಾಸನಬದ್ಧ ನಮೂನೆಯಿರುವುದಿಲ್ಲ. ತತ್ಪರಿಣಾಮವಾಗಿ, ಅಂಥ ಹೇಳಿಕೆಗೆ ಯಾವ ಮೌಲ್ಯದ ಅಥವಾ ಮಹತ್ವದ ಸಾಕ್ಷ್ಯವನ್ನು ಅಗತ್ಯವಾಗಿ ಸೇರಿಸಬೇಕು ಎಂಬುದನ್ನು ಪ್ರತಿಯೊಂದು ನಿರ್ದಿಷ್ಟ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳು ಅವಲಂಬಿಸಿರುತ್ತವೆ. ಮರಣ ಕಾಲೀನ ಹೇಳಿಕೆಯನ್ನು ದಾಖಲಿಸುವ ವ್ಯಕ್ತಿಯು, ಮೃತನು ಸರಿಯಾದ ಮಾನಸಿಕ ಸ್ಥಿತಿಯಲ್ಲಿದ್ದನೆಂಬುದನ್ನು ಮನವರಿಕೆ ಮಾಡಿಕೊಡಬೇಕು ಎಂಬುದು ಅಗತ್ಯವಾಗಿರುತ್ತದೆ. ಘೋಷಣಾಕಾರನು, ವೈದ್ಯರು ಪರೀಕ್ಷೆಯನ್ನು ಮಾಡದಿದ್ದರೂ ಹೇಳಿಕೆಯನ್ನು ನೀಡಲು ಸೂಕ್ತನಾಗಿದ್ದನು ಎಂಬುದು ದಂಡಾಧಿಕಾರಿಯವರ ಸಾಕ್ಷ್ಯದ ಮೂಲಕ ರುಜುವಾತಾಗಿದ್ದಲ್ಲಿ, ಘೋಷಣೆಯು ಅದರ ಮೇರೆಗೆ ಕಾರ್ಯ ನಿರ್ವಹಿಸಬಹುದು. ಪರಂತು, ಅಂತಿಮವಾಗಿ ನ್ಯಾಯಾಲಯವು ಇಚ್ಛಾಪೂರ್ವಕವಾಗಿರುವ ಹಾಗೂ ಸತ್ಯವಾಗಿರುವ ಅದು ಪಡೆದುಕೊಳ್ಳುವುದು.

ನಿಶಾನೆ ಪಿ.11ರ ಮುಖ್ಯಾಂಶ ಕನ್ನಡದಲ್ಲಿದ್ದು ಅದನ್ನು ಈ ಕೆಳಗೆ ಟಿಪ್ಪಣಿ ಮಾಡಲಾದ ಹಾಗೆ ಭಾಷಾಂತರಿಸಲಾಗಿದೆ:

> 'ಮಳಖೇಡದ ನಿವಾಸಿಯಾಗಿರುವ ನಾನು ಕೂಲಿ ಮಾಡಿಕೊಂಡು ನನ್ನ ಜೀವನ ದೂಡುತ್ತಿದ್ದೆ. ನಾನು ನನ್ನ ಗಂಡನ ಚಿಕ್ಕಮ್ಮ ಶೆಟ್ಟವ್ವ, ಯಲ್ಲಪ್ಪನ ಹೆಂಡತಿಯನ್ನು, ಯಾಕೆ ನಮ್ಮ ಮನೆಯ ಬಳಿ ಇರುವ ಹುಣಸೆ ಮರವನ್ನು ಕಡಿದಿರೆಂದು ಕೇಳಿದೆ. ಅದನ್ನು ಕೇಳಲು ನೀನು ಯಾರು ಎಂದು ಪ್ರತ್ಯುತ್ತರ ನೀಡಿ ನನಗೆ ಪಾಠ ಹೇಳುತ್ತೀಯೆ ಎಂದು ಗದರಿಸಿದಳು. ಆಗ ಅಲ್ಲೇ ಇದ್ದ ನನ್ನ ಗಂಡ ನೀನು ಮನೆಗೆ ಹೋಗು ಎಂದು ಹೇಳಿದರು. ಅದರಂತೆ ನಾನು ಬಂದುಬಿಟ್ಟೆ. ಯಲ್ಲಮ್ಮ ಮನೆಯಲ್ಲಿದ್ದಾಗ,

ಶೆಟ್ಟವ್ವ ಹಾಗೂ ಅವಳ ಸೊಸೆ ಲಕ್ಷ್ಮಿ ಮನೆಯೊಳಗೆ ನುಗ್ಗಿ ಸೀಮೆಎಣ್ಣೆ ಇದ್ದ ಕ್ಯಾನನ್ನು ತೆಗೆದುಕೊಂಡು ಶೆಟ್ಟವ್ವ ಅದನ್ನು ಅವಳ ದೇಹದ ಮೇಲೆ (ಯಲ್ಲಮ್ಮ) ಸುರಿದಿದ್ದಾಳೆ ಹಾಗೂ ಲಕ್ಷ್ಮಿಯು ಬೆಂಕಿ ಕಡ್ಡಿಯಿಂದ ಗೀರಿ ಅವಳ ಬಟ್ಟೆಯನ್ನು ಹೊತ್ತಿಸಿದ್ದಾಳೆ. ಇದಕ್ಕೆ ನನ್ನ ಸೊಸೆ ಶೋಭಾ ಸಾಕ್ಷಿಯಾಗಿದ್ದಳು ಹಾಗೂ ಅವಳು ತನ್ನ ಮಾವನನ್ನು ಕರೆತರಲು ಮನೆಯಿಂದ ಹೊರಗೆ ಓಡಿದಳು. ಕೂಡಲೇ ಶೆಟ್ಟವ್ವ ಹಾಗೂ ಲಕ್ಷ್ಮಿ ಮನೆಯ ಬಾಗಿಲನ್ನು ಮುಚ್ಚಿ ಹೊರಟು ಹೋದರು. ಈ ಮಧ್ಯೆ ಅವಳ ಗಂಡ, ಶೋಭಾ ಹಾಗೂ ಓಣಿಯ ನೆರೆಹೊರೆಯವರು ಓಡಿ ಬಂದು ಕಂಬಳಿಯನ್ನು ಮೈಮೇಲೆ ಸುತ್ತಿ, ನೀರನ್ನು ಹಾಕಿ ಬೆಂಕಿಯನ್ನು ನಂದಿಸಿದರು. ಆ ನಂತರ ಅವಳ ಗಂಡ, ಶೋಭಾ ಹಾಗೂ ನೆರಹೊರೆಯುವರು ಭೀಮಲ್‌ಖೇಡ ಆಸ್ಪತ್ರೆಗೆ ಕೊಂಡೊಯ್ದರು. ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಬೀದರ್‌ನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ವೈದ್ಯರು ಅವಳಿಗೆ ಚಿಕಿತ್ಸೆ ನೀಡಿದರು ಹಾಗೂ ಅವಳಿಗೆ ಹೊಟ್ಟೆ, ಎರಡೂ ಕೈಗಳು, ಮುಖ, ಎರಡೂ ಕಾಲುಗಳು, ಎದೆ ಭಾಗ ಹಾಗೂ ಹಿಂಭಾಗದಲ್ಲಿ ಸುಟ್ಟ ಗಾಯಗಳಾಗಿದ್ದವು. ಅವಳನ್ನು ಸಾಯಿಸಲು ಅವರಿಬ್ಬರು ಹೀಗೆ ಮಾಡಿದರು.

ಸಹಿ/–

ಯಲ್ಲಮ್ಮನ ಎಡಗೈ ಹೆಬ್ಬೆಟ್ಟಿನ ಗುರುತು

ಪೊಲೀಸು ಉಪ ನಿರೀಕ್ಷಕರು ಮಳಖೇಡ.

15. ಹಾಗಾಗಿ ಪೊಲೀಸು ಉಪ–ನಿರೀಕ್ಷಕ ಮೋಹನ್‌ರವರು, ಹೇಳಿಕೆಯನ್ನು ನೀಡಲು ಮೃತರ ಮನೋದಾರ್ಢ್ಯ ಕುರಿತಂತೆ ವೈದ್ಯರ ಅಭಿಪ್ರಾಯವನ್ನು ಪಡೆದುಕೊಂಡ ತರುವಾಯ ಹಾಗೂ ಅವಳಿಗೆ ಪ್ರಜ್ಞೆ ಬಂದ ನಂತರ ಅವರು ದಾಖಲಿಸಿರುವರೆಂಬುದನ್ನು ನಿಶಾನೆ ಪಿ.1 ತಿಳಿಸುತ್ತದೆ. ಇದನ್ನು ಮಧ್ಯಾಹ್ನ 2.30 ಹಾಗೂ 4.00 ಗಂಟೆಯ

ನಡುವೆ ದಾಖಲಿಸಲಾಗಿತ್ತು. ಪಾಟೀ ಸವಾಲನ್ನು ನಡೆಸುವ ಸಮಯದಲ್ಲಿ ಪ್ರಾ.ಸಾ.15, ಮೋಹನ್‌ರವರು, ತಾನು ಗಾಯಾಳುವಿನ ಸ್ಥಿತಿಯನ್ನು ತಿಳಿದುಕೊಳ್ಳಲು ವೈದ್ಯರಿಗೆ ಲಿಖಿತ ಮನವಿಯನ್ನು ನೀಡಿದ್ದೇನೆಂದು ಹಾಗೂ ಅವಳ ಸ್ಥಿತಿಯ ಬಗ್ಗೆ ತನಗೆ ಪ್ರತ್ಯೇಕ ಪತ್ರವನ್ನು ವೈದ್ಯರು ನೀಡಿದ್ದರೆಂದು ಹೇಳಿಕೆ ನೀಡಿದ್ದಾರೆ. ತಾನು ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಅವಳ ಹೇಳಿಕೆಯನ್ನು ದಾಖಲಿಸಿದಾಗ ಗಾಯಾಳುವಿನ ಪತಿಯು ಅಲ್ಲಿದ್ದರೆಂದು ತಿಳಿಸಿದ್ದರು. ಹಾಗೆಯೇ ಗಾಯಾಳುವಿನ ಪತಿ ನಾಗಪ್ಪ ಈಗ ಇರುವುದಿಲ್ಲ. ಆದ್ದರಿಂದ ದೋಷಾರೋಪ ಪಟ್ಟಿಯಲ್ಲಿ ಸಾಕ್ಷಿದಾರನಾಗಿ ತೋರಿಸಿದ್ದರೂ ಅವನನ್ನು ವಿಚಾರಣೆ ಮಾಡಿರುವುದಿಲ್ಲ. ತಾನು ಹೇಳಿಕೆಯನ್ನು ದಾಖಲಿಸುವಾಗ ಉದ್ದಕ್ಕೂ ವೈದ್ಯರು ಅಲ್ಲಿದ್ದರೆಂಬುದು ಪ್ರಾ.ಸಾ.15ರ ಆವೃತ್ತಿಯಾಗಿದೆ. ಅವನು, ವೈದ್ಯರ ಹಿಂಬರಹವನ್ನು ನಿಶಾನೆ. ಪಿ.11ರಲ್ಲಿ ತಾನು ಪಡೆದುಕೊಂಡಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ.

ಪ್ರಾ.ಸಾ.15ರಲ್ಲಿ, ಆ ಸಮಯದಲ್ಲಿ ಹಾಜರಿದ್ದ ವೈದ್ಯರ ಹೆಸರನ್ನು ಸೂಚಿಸಿಲ್ಲ ಹಾಗೂ ವೈದ್ಯರು, ಅವಳ ಮಾನಸಿಕ ಸ್ಥಿತಿಯ ಬಗ್ಗೆ ಪ್ರಾ.ಸಾ.15ಕ್ಕೆ ನೀಡಿದ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

16. ಪ್ರಾ.ಸಾ.15 ಮೋಹನ್‌ರವರು, ತಾನು ಯಲ್ಲಮ್ಮನ ಹೇಳಿಕೆಯನ್ನು ದಾಖಲಿಸುವುದು ತಹಶೀಲ್ದಾರರಿಗೆ ಗೊತ್ತಿತ್ತು ಎಂದು ಹೇಳಿಕೆ ನೀಡಿದ್ದಾರೆ. ನಂತರ ನಿಶಾನೆ ಪಿ.16, ತಹಶೀಲ್ದಾರ್, ಶ್ರೀಮತಿ ಉಷಾರಾಣಿ (ಪ್ರಾ.ಸಾ.18) ವೈದ್ಯರ ಸಮ್ಮುಖದಲ್ಲಿ ಮಧ್ಯಾಹ್ನ 2.30 ಹಾಗೂ 3.00ರ ನಡುವೆ ದಾಖಲಿಸಿದ ಯಲ್ಲಮ್ಮನ ಹೇಳಿಕೆಯಾಗಿದೆಯೆಂಬುದನ್ನು ತಿಳಿಸುತ್ತದೆ. ನಿಶಾನೆ ಪಿ.16 ಪ್ರಶ್ನೋತ್ತರದ ರೂಪದಲ್ಲಿದೆ. ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ॥ ಸುಧೀರ್, ಪ್ರಾ.ಸಾ. 20 ಇವರು, ತಹಶೀಲ್ದಾರ್‌ರವರು ತನ್ನ ಸಮ್ಮುಖದಲ್ಲಿ ಯಲ್ಲಮ್ಮನ ಹೇಳಿಕೆಯನ್ನು ದಾಖಲಿಸಿರುವ ಕುರಿತ ಆ ದಿನದಂದು ಹೇಳಿಕೆ ನೀಡಿದ್ದಾರೆ. ಅವರು, ಅವಳು ಹೇಳಿಕೆಯನ್ನು ನೀಡಲು ಸಮರ್ಥಳಾಗಿದ್ದಳೆಂದು ಮತ್ತೆ ಹೇಳಿಕೆ ನೀಡಿದ್ದಾರೆ. ನಿಶಾನೆ ಪಿ 16 (ಬಿ), ನಿಶಾನೆ ಪಿ.16ರಲ್ಲಿ ಕಂಡು ಬಂದ ಅವನ ಹಿಂಬರಹವಾಗಿದೆ. ತಹಶೀಲ್ದಾರ್‌ರ

ಪ್ರಮಾಣಪತ್ರವನ್ನು ನಿಶಾನೆ. ಪಿ.16(ಎ) ಎಂದು ಗುರುತು ಮಾಡಲಾಗಿದ್ದು ಅದನ್ನು ಡಾ॥ ಸುಧೀರ್‌ರವರು ನಿಶಾನೆ ಪಿ.16(ಬಿ) ಎಂದು ಗುರುತು ಮಾಡಿದ್ದಾರೆ. ಇಂಗ್ಲೀಷಿನ ಭಾಷಾಂತರವು ಈ ಮುಂದಿನಂತಿರುತ್ತದೆ.

> ನಿಶಾನೆ ಪಿ.16(ಎ): ಮರಣಕಾಲೀನ ಹೇಳಿಕೆಯನ್ನು ವೈದ್ಯಕೀಯ ಅಧಿಕಾರಿಯ ಸಮ್ಮುಖದಲ್ಲಿ ದಾಖಲಿಸಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.
>
> ಸಹಿ/–
> ತಹಶೀಲ್ದಾರ್
>
> ನಿಶಾನೆ 16 (ಬಿ): ಮೇಲ್ಕಂಡ ಹೇಳಿಕೆಯನ್ನು, ದಿನಾಂಕ 18.06.2007ರಂದು ಮಧ್ಯಾಹ್ನ 2.30ರಂದು ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಸಮ್ಮುಖದಲ್ಲಿ ದಾಖಲಿಸಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.
>
> ಸಹಿ/–
> ವೈದ್ಯರು.

17. ನಿಶಾನೆ ಪಿ.11 ಇದು, ನಿಶಾನೆ ಪಿ.12ರ ಪ್ರಕಾರ ಪ್ರಥಮ ಮಾಹಿತಿ ವರದಿಯನ್ನು (ಎಫ್.ಐ.ಆರ್) ದಾಖಲಿಸುವುದನ್ನು ಆಧರಿಸಿದೆ. ಆದ್ದರಿಂದ ಕ್ರಿಮಿನಲ್ ತನಿಖಾ ಏಜೆನ್ಸಿಯನ್ನು ನಿಶಾನೆ ಪಿ.11ರ ಮೂಲಕ ಚಾಲನೆಗೊಳಿಸಲಾಗಿತ್ತು. ನಿಶಾನೆ ಪಿ.16, ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿನ ಹಿರಿಯ ತಜ್ಞ ಡಾ॥ ಸುಧೀರ್ ರವರ ಸಮ್ಮುಖದಲ್ಲಿ ಮಧ್ಯಾಹ್ನ 2.30 ಹಾಗೂ 3.00ರ ಸಮಯದ ನಡುವೆ ಶ್ರೀಮತಿ ಉಷಾರಾಣಿ, ತಹಶೀಲ್ದಾರ್ ಇವರು ದಾಖಲಿಸಿರುವರೆಂದು ಹೇಳಲಾದ ಗಾಯಾಳು – ಯಲ್ಲಮ್ಮಳ ಮರಣಕಾಲೀನ ಹೇಳಿಕೆಯಾಗಿದೆ. ಡಾ॥ ಸುಧೀರ್ ರವರು ಇದನ್ನು ತನ್ನ ಸಮ್ಮುಖದಲ್ಲಿ ನಿಶಾನೆ ಪಿ.16ನ್ನು ತಹಶೀಲ್ದಾರ್‌ರವರು ದಾಖಲಿಸಿದ್ದರೆಂದು ಹಾಗೂ ತಾನು ಅದನ್ನು ಜಾರಿಗೊಳಿಸಲು ಪ್ರಮಾಣೀಕರಿಸಿದ್ದು

ಅದನ್ನು ಪ್ರಾ.ಸಾ.20 ಎಂದು ಸಾಕ್ಷ್ಯ ನೀಡಲಾಗಿದೆ. ಪೊಲೀಸು ಉಪ ನಿರೀಕ್ಷಕ ಮೋಹನ್‌ರವರು ನಿಶಾನೆ ಪಿ.11 ನ್ನು ದಾಖಲಿಸುವಾಗ ವೈದ್ಯರು ನಿಜವಾಗಿಯೂ ಅಲ್ಲಿದ್ದರೆ, **ಲಕ್ಷ್ಮಣ್** (ಮೇಲಿನ) ಪ್ರಕರಣದಲ್ಲಿ ನೀಡಲಾದ ನಿರ್ಣಯದ ಪ್ರಕಾರ ಅಂಥ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿರದಿದ್ದರೂ ಪ್ರಮಾಣಪತ್ರವನ್ನು ಪಡೆದುಕೊಳ್ಳುವ ಪ್ರಮೇಯ ಬರುವುದಿಲ್ಲ. ಮೃತರ ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯರಿಂದ ಪತ್ರವನ್ನು ಪಡೆದುಕೊಂಡಿರುವ ನಂತರವೂ ಅದನ್ನು ವೈದ್ಯರ ಸಮ್ಮುಖದಲ್ಲಿ ಯಲ್ಲಮ್ಮನ ಹೇಳಿಕೆಯನ್ನು ದಾಖಲಿಸಿದೆ ಎಂಬುದನ್ನು ಪ್ರಾ.ಸಾ.15 ಒತ್ತಿ ಹೇಳುತ್ತಿರುವುದರ ಹಿನ್ನೆಲೆಯಲ್ಲಿ ಇದು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಆದರೆ ಡಾ|| ಸುಧೀರ್‌ರವರು, ಪೊಲೀಸು ಉಪ ನಿರೀಕ್ಷಕರು ಮೋಹನ್ ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಹಾಜರಿದ್ದ ಬಗ್ಗೆ ಅಥವಾ ತನ್ನ ಸಮ್ಮುಖದಲ್ಲಿ ಅವಳ ಹೇಳಿಕೆಯನ್ನು ದಾಖಲಿಸಿರುವ ಬಗ್ಗೆ ಏನನ್ನೂ ಮಾತಾಡಿಯೇ ಇಲ್ಲ.

18. ಪ್ರಾಸಿಕ್ಯೂಷನ್‌ನ ಪ್ರಕಾರ ನಿಶಾನೆ ಪಿ.11 ಹಾಗೂ ನಿಶಾನೆ ಪಿ.16ನ್ನು ದಾಖಲಿಸಿರುವ ಸಮಯದಿಂದ ಸಾಕ್ಷ್ಯವಾಗುವ ಹಾಗೆ ಬಹುತೇಕ ಒಂದೇ ಸಮಯದಲ್ಲಿ ಮಾಡಲಾಗಿದೆ. ಶ್ರೀಮತಿ ಉಷಾರಾಣಿ, ತಹಸೀಲ್ದಾರ್‌ರವರು ಮಧ್ಯಾಹ್ನ 2.30ರ ಸಮಯದಲ್ಲಿ ಅದೇ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಲು ಪ್ರಾರಂಭಿಸಿದ್ದಾಗ, ಪೊಲೀಸು ಉಪ ನಿರೀಕ್ಷಕ ಮೋಹನ್‌ರವರ ಹೇಗೆ ಮಧ್ಯಾಹ್ನ 2.30ರಲ್ಲಿ ದಾಖಲಿಸಿದ್ದರು ಎಂಬುದು ಅರ್ಥವಾಗದ ಸಂಗತಿಯಾಗಿದೆ. ಮೋಹನ್‌ರನ್ನು ಹೊರತುಪಡಿಸಿದರೆ, ನಾಗಪ್ಪ( ಮೃತರ ಪತಿ) ಹಾಗೂ ವೈದ್ಯರು, ಯಾರು ಸಹ ಆ ಸಮಯದಲ್ಲಿ ಇರಲಿಲ್ಲ ಎಂಬುದರ ಹಿನ್ನೆಲೆಯಲ್ಲಿ ಇದು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ. ನಿಶಾನೆ ಪಿ.11ರ ಅಧಿಕೃತತೆಯ ಬಗ್ಗೆ ನ್ಯಾಯಾಲಯದ ಮನಸ್ಸಿನಲ್ಲಿ ಯುಕ್ತ ಸಂದೇಹವನ್ನು ಸೃಷ್ಟಿಸಿರುವ ಪ್ರಬಲ ಸನ್ನಿವೇಶ ಇದಾಗಿದೆ.

19. ತೀರ್ಪಿನ 14ನೇ ಕಂಡಿಕೆಯಲ್ಲಿ ಮಾನ್ಯ ನ್ಯಾಯಾಧೀಶರು, ಮೋಹನ್ ರವರು ದಾಖಲಿಸಿರುವ ನಿಶಾನೆ ಪಿ.11ರ ಬಗ್ಗೆ ಅಗತ್ಯ ಚರ್ಚೆಯನ್ನು ಮಾಡಿದ್ದು ಪ್ರಾ.ಸಾ.15 ದಾಖಲಿಸಿದ ನಿಶಾನೆ ಪಿ.11ರ ದಾಖಲೆಯಲ್ಲಿ ನಂಬದಿರುವಂಥದು

ಏನೂ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಮಾನ್ಯ ನ್ಯಾಯಾಧೀಶರು, ಈ ನ್ಯಾಯಾಲಯವು ಪರಿಗಣಿಸಿದ ಎರಡು ಬಲಯುತವಾದ ಸನ್ನಿವೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಧ್ಯತೆಗಳ ಸ್ಥೂಲ ಪ್ರಾಬಲ್ಯದ ಆಧಾರದ ಮೇಲೆ ಅದನ್ನು ಪರೀಕ್ಷಿಸಿಲ್ಲ.

20. ಇದರ ಹೊರತಾಗಿ, ಪೊಲೀಸರು, ಯುಕ್ತವಲ್ಲದ ವಿಳಂಬವನ್ನು ಮಾಡದೆ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಧೀಶರ ಮುಂದೆ ಪ್ರ.ಮಾ. ವರದಿಯನ್ನು ದಾಖಲಿಸಿದ್ದಾರೆ. ಅದೇ ದಿನ ಸಾಯಂಕಾಲ 6.15ಕ್ಕೆ ಪ್ರಕರಣವನ್ನು ದಾಖಲಿಸಿದ್ದರೆ, ನಿಶಾನೆ ಪಿ.11 ಹಾಗೂ ಪಿ.12ನ್ನು, ಸಾಯಂಕಾಲ 7.15ಕ್ಕೆ ಪಿ.ಸಿ.931ಕ್ಕೆ ಹಸ್ತಾಂತರಿಸಿದ್ದರೆ, ಜೆ.ಎಂ.ಎಫ್.ಸಿ ಮುಂದೆ, ಪಿ.ಸಿ. 931 ಮಧ್ಯರಾತ್ರಿ 12ಕ್ಕೆ ಅವರು ಹೇಗೆ ಪ್ರಕರಣವನ್ನು ದಾಖಲಿಸಿದರು ಎಂಬುದು ಅರ್ಥಮಾಡಿಕೊಳ್ಳಲಾಗದ ಸಂಗತಿಯಾಗಿದೆ. ಪೊಲೀಸು ಪೇದೆಯನ್ನು ಸಾಕ್ಷಿದಾರನನ್ನಾಗಿ ಉಲ್ಲೇಖಿಸಿಲ್ಲ ಅಥವಾ ನ್ಯಾಯಾಲಯದ ಮುಂದೆ ವಿಳಂಬದ ಬಗ್ಗೆ ವಿಚಾರಣೆಯನ್ನು ಮಾಡಿಲ್ಲ. ಈ ಸಂದರ್ಭವು, ಪೊಲೀಸು ಉಪ ನಿರೀಕ್ಷಕ ಮೋಹನ್‌ರವರು ಮಧ್ಯಾಹ್ನ 2.30 ಹಾಗೂ 4.00 ಗಂಟೆಯಲ್ಲಿ ದಾಖಲಿಸಿರುವ ನಿಶಾನೆ. ಪಿ.11ರ ಬಗ್ಗೆ ಯುಕ್ತ ಸಂದೇಹವನ್ನೂ ಸಹ ಹುಟ್ಟಿಸುತ್ತದೆ.

21. ನಿಶಾನೆ ಪಿ.11ಕ್ಕೆ ಸಂಬಂಧಪಟ್ಟಂತೆ ಯುಕ್ತ ಸಾಕ್ಷ್ಯವನ್ನು ಗೊತ್ತುಪಡಿಸಿದ ನಂತರ, ನಿಶಾನೆ ಪಿ.11 ವಿಶ್ವಾಸಾರ್ಹವಾದ ಸಾಕ್ಷ್ಯವೆಂದು ಒಪ್ಪಿಕೊಳ್ಳುವುದು ಅದರಲ್ಲು ನಿರ್ದಿಷ್ಟವಾಗಿ, ಭಾರತೀಯ ಸಾಕ್ಷ್ಯ ಅಧಿನಿಯಮ, 32ನೇ ಪ್ರಕರಣದ ಮೇರೆಗೆ ಮರಣಕಾಲೀನ ಹೇಳಿಕೆಯೆಂದು ಪರಿಗಣಿಸುವುದು ತುಂಬಾ ಕಷ್ಟಕರವಾದುದೆಂದು ಹೇಳಬಹುದಾಗಿದೆ. ಆದ್ದರಿಂದ ಅಧಿವಿಚಾರಣಾ ನ್ಯಾಯಾಲಯವು ನಿಶಾನೆ. ಪಿ.11ನ್ನು ಮರಣ ಕಾಲೀನ ಹೇಳಿಕೆಯೆಂದು ಒಪ್ಪಿಕೊಳ್ಳುವುದನ್ನು ಸಮರ್ಥಿಸಿಲ್ಲ. ತದನುಸಾರವಾಗಿ, ವಿವಾದಾಂಶ ಸಂ.(1)ಕ್ಕೆ ನಕಾರಾತ್ಮಕವಾಗಿ ಉತ್ತರಿಸಿದೆ.

22. **ಅಂಶ ಸಂ.(2)**: ಅಧಿವಿಚಾರಣಾ ನ್ಯಾಯಾಲಯವು, ಪ್ರಾ.ಸಾ. 10ಎಂದು ವಿಚಾರಣೆ ಮಾಡಲಾದ ಬಾಲಪ್ಪನವರ ಸಾಕ್ಷ್ಯವನ್ನು ಆಧರಿಸಿದೆ ಹಾಗೂ ಪ್ರಾ.ಸಾ.11 ಎಂದು ಶೋಭಾಳನ್ನು ವಿಚಾರಣೆ ಮಾಡಿದೆ ಹಾಗೂ ಪ್ರಾ.ಸಾ. 18ರ ಸಾಕ್ಷ್ಯ ಉಷಾರಾಣಿ ಹಾಗೂ ಪ್ರಾ.ಸಾ.20 ಡಾ॥ ಸುಧೀರ್ ರವರನ್ನು ಆರೋಪಿಗಳ ಅಪರಾಧ ನಿರ್ಣಯ ಮಾಡುವ ಸಾಕ್ಷ್ಯವೆಂದು ಅವಲಂಬಿಸಿದೆ. ಅಲ್ಲದೆ, ಹೆಚ್ಚುವರಿ ತಹಸೀಲ್ದಾರ್ (ಪ್ರಾ.ಸಾ.10) ರವರು ದಾಖಲಿಸಿರುವರೆಂದು ಹೇಳಲಾದ ಯಲ್ಲಮ್ಮನ ಮರಣಕಾಲೀನ ಹೇಳಿಕೆ ನಿಶಾನೆ ಪಿ.16ರ ಮೇಲೆ ನಂಬಿಕೆಯನ್ನು ಇಟ್ಟಿದೆ.

23. ಬಾಲಪ್ಪನು ಮೃತ ಯಲ್ಲಮ್ಮನ ಮಗನಾಗಿದ್ದಾನೆ. ಅವರು ಮಧ್ಯಾಹ್ನ ಸುಮಾರು 2 ಗಂಟೆಗೆ ಅದೇ ದಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ತನ್ನ ತಾಯಿಯನ್ನು ನೋಡಿದ್ದಾನೆ. ಅವಳು ಯುಕ್ತ ಮನಃಸ್ಥಿತಿಯಲ್ಲಿದ್ದು, ತನಗೆ ಆದ ಗಾಯಗಳ ಕಾರಣಗಳ ಬಗ್ಗೆ ಅವನಿಗೆ ತಿಳಿಸಿದ್ದಾಳೆ. ಶೆಟ್ಟವ್ವ ಹಾಗೂ ಲಕ್ಷ್ಮಿ ನಮ್ಮ ಮನೆಗೆ ನುಗ್ಗಿ ಸೀಮೆಎಣ್ಣೆ ಸುರಿದು ಬೆಂಕಿ ಕಡ್ಡಿ ಗೀರಿ ತನ್ನ ಬಟ್ಟೆಗಳಿಗೆ ಬೆಂಕಿ ಹಚ್ಚಿಹೋದರೆಂದು ತನಗೆ ತನ್ನ ತಾಯಿ ಹೇಳಿದಳೆಂಬುದು ಅವನ ವಾದವಾಗಿದೆ. ಪ್ರಾ.ಸಾ.10ರ ಸಾಕ್ಷ್ಯವು, ಬಾಯಿ ಮಾತಿನ ಮರಣಕಾಲೀನ ಹೇಳಿಕೆಗೆ ಸಂಬಂಧಪಟ್ಟ ರುಜುವಾತಾಗಿದೆ.

24. ಒಪ್ಪಿತವಾದಂತೆ, ಅವನ ತಾಯಿಗೆ ಸುಟ್ಟಗಾಯಗಳಾದಾಗ ಬಾಲಪ್ಪ ಮನೆಯಲ್ಲಿರಲಿಲ್ಲ. ಅವನು ತನ್ನ ಕೆಲಸಕ್ಕಾಗಿ ಹುಮನಾಬಾದ್‌ಗೆ ಹೋಗಿದ್ದನು ಹಾಗೂ ಅವನಿಗೆ ವಿಷಯ ಗೊತ್ತಾದಾಗ, ಅವನು ನೇರವಾಗಿ ಆಸ್ಪತ್ರೆಗೆ ಹೋಗಿದ್ದಾಗ, ವೈದ್ಯರು ಅವಳಿಗೆ ಚಿಕಿತ್ಸೆ ನೀಡುತ್ತಿದ್ದರು ಎಂಬುದು ಅವನ ವಾದವಾಗಿದೆ. ವಿಚಾರಣೆಯಲ್ಲಿ ಅವಳು, ಯಾಕೆ ಹುಣಸೆಮರವನ್ನು ಕಡಿದರೆಂದು ಅವರನ್ನು ಕೇಳಿದಾಗ, ಅವರು ನನ್ನನ್ನು ಹೆದರಿಸಿದರೆಂದು ಹಾಗೂ ನಂತರ ಮನೆಗೆ ಬಂದು ಬೆಂಕಿ ಹಚ್ಚಿದರೆಂದು ಅವನಿಗೆ ಹೇಳಿರುವಳೆಂದು ತಿಳಿಸಲಾಗಿದೆ. ತನ್ನ ಹೆಂಡತಿ ಶೋಭಾ ಮನೆಯಲ್ಲೇ ಇದ್ದಳೆಂಬುದು ಅವನ ಪ್ರತಿಪಾದನೆಯಾಗಿದೆ.

25. ಪ್ರಾಸಾ. 10 ಬಾಲಪ್ಪನನ್ನು ದೀರ್ಘವಾಗಿ ಪಾಟೀಸವಾಲು ಮಾಡಲಾಗಿದೆ. ಅವನ ಸಹೋದರರು ಮುಂಬೈನಲ್ಲಿ ಕೆಲಸ ಮಾಡುತ್ತಿದ್ದಾರೆ. ತಮ್ಮ ನಡುವೆ ಹಾಗೂ ಆರೋಪಿಗಳ ಭೂಮಿಯ ಸಂಬಂಧ ವಿವಾದವಿತ್ತೆಂದು ಹಾಗೂ ಆರೋಪಿಗಳು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ್ದು ಅದು ಹುಮನಾಬಾದ್ ಕೋರ್ಟ್‌ನಲ್ಲಿ ಇತ್ಯರ್ಥದಲ್ಲಿತ್ತೆಂದು ಒಪ್ಪಿಕೊಂಡಿದ್ದಾನೆ. ಶೆಟ್ಟವ್ವ ಅವನ ಚಿಕ್ಕಮ್ಮನಲ್ಲದೆ ಬೇರಾರು ಅಲ್ಲ. ಅವನು ಘಟನೆ ನಡೆದ ದಿನದಂದು ಬೆಳಿಗ್ಗೆ 10.00ಗಂಟೆಗೆ ಮನೆಯನ್ನು ಬಿಟ್ಟೆನೆಂದು ಹಾಗೂ ಹುಮನಾಬಾದ್ ಹಾಗೂ ಭೇಮಲ್‌ಖೇಡ ನಡುವಿನ ದೂರ 35 ಕಿ.ಮೀ. ಗಳಾಗಿವೆಯೆಂದು ತಿಳಿಸಿರುತ್ತಾನೆ. ಅವನು ಹುಮನಾಬಾದ್‌ನಲ್ಲಿದ್ದಾಗ ಈ ಘಟನೆ ಕುರಿತು ತನಗೆ ಯಾರು ತಿಳಿಸಿದರು ಎಂಬುದು ಅವನಿಗೆ ನೆನಪಿಲ್ಲ. ಅವನ ಹೆಂಡತಿ ಆಸ್ಪತ್ರೆಯಲ್ಲಿರಲಿಲ್ಲ. ಅವನ ತಂದೆ ಹಾಗೂ ಗಂಗಮ್ಮ ಆಸ್ಪತ್ರೆಯಲ್ಲಿದ್ದರೆಂಬುದು ಅವನ ನಿರ್ದಿಷ್ಟ ವಾದವಾಗಿದೆ.

26. ಅಲ್ಲದೆ, ಪಾಟೀ ಸವಾಲಿನಲ್ಲಿ ಪ್ರಾ.ಸಾ. 10, ಮಧ್ಯಾಹ್ನ 2.00 ಗಂಟೆಗೆ ಬೀದರ್‌ಗೆ ಬಂದೆನೆಂದು, ಯಲ್ಲಮ್ಮ ಹಾಗೂ ತಿಪ್ಪವ್ವ ಕೂಡ ಬಂದರೆಂದು ಹೇಳಿಕೆ ಕೊಟ್ಟಿದ್ದಾನೆ. ಪೋಲೀಸು ಸಿಬ್ಬಂದಿ ಆಸ್ಪತ್ರೆಯಲ್ಲಿರಲಿಲ್ಲ ಹಾಗೂ ಅವರು ತಡವಾಗಿ ಬಂದಿದ್ದಾರೆ. ತಂದೆಯೊಂದಿಗೆ ನನ್ನ ತಾಯಿಯು ಜಗಳವಾಡಿದ್ದರಿಂದ ಹಾಗೂ ಪ್ರತಿಯೊಬ್ಬರಿಗೂ ಅದು ಗೊತ್ತಾಗಿದ್ದರಿಂದ ಅವಳೇ ಬೆಂಕಿ ಹಚ್ಚಿಕೊಂಡಳೆಂದು ತನಗೆ ಸೂಚನೆ ಬಂತು ಎಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ. ತನ್ನ ತಾಯಿ ಸಂಪೂರ್ಣವಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಳೆಂದು ಹಾಗೂ ಏನನ್ನೂ ಮಾಡಲು ಸಾಧ್ಯವಿಲ್ಲವೆಂಬ ಸೂಚನೆ ಬಂತೆಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ. ಘಟನೆ ಬಗ್ಗೆ ತನ್ನ ತಾಯಿ ಏನನ್ನೂ ತನಗೆ ತಿಳಿಸಿಲ್ಲವೆಂದು ಬಂದ ಸೂಚನೆಯನ್ನು ಸಹ ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ. ಸುದೀರ್ಘವಾಗಿ ಅವನನ್ನು ಪಾಟೀ ಸವಾಲಿಗೊಳಪಡಿಸಿದ್ದರೂ ಕೂಡ, ಅವನ ಹೇಳಿಕೆಯನ್ನು ನಂಬದೆ ಅನುಮಾನಿಸುವುದರಲ್ಲಿ ಯಾವುದೇ ಉಪಯೋಗವಿಲ್ಲ.

27. ಡಾ॥ ಸುಧೀರ್ (ಪ್ರಾ.ಸಾ.20) ಇವರ ಸಾಕ್ಷ್ಯವು ನಮ್ಮ ಬಳಿ ಇದೆ. ಅವರು, ಆ ದಿನದಂದು ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕಾರ್ಯ ನಿರ್ವಹಿಸಿದ್ದರು. ಅವರು, ತಹಸೀಲ್ದಾರ್ ಶ್ರೀಮತಿ ಉಷಾರಾಣಿಯವರು ರೋಗಿ ಯಲ್ಲಮ್ಮನನ್ನು ನೋಡುತ್ತಿದ್ದ ಬಗ್ಗೆ ಹಾಗೂ ರೋಗಿಯ ಮನಃಸ್ಥಿತಿಯನ್ನು ತನ್ನೊಂದಿಗೆ ವಿಚಾರಿಸಿರುವ ಬಗ್ಗೆ ನಂತರ ಅವಳ ಹೇಳಿಕೆಯನ್ನು ದಾಖಲಿಸಿರುವ ಬಗ್ಗೆ ಸಾಕ್ಷ್ಯ ನೀಡಿದ್ದಾರೆ. ಡಾ॥ ಸುಧೀರ್, ಆ ದಿನದಂದು ಹಿರಿಯ ತಜ್ಞರಾಗಿ ಕಾರ್ಯ ನಿರ್ವಹಿಸಿದ್ದರು ಎಂಬ ಸಂಗತಿಯಲ್ಲಿ ಯಾವುದೇ ವಿವಾದವಿರುವುದಿಲ್ಲ. ಅವರು ಗಾಯಾಳು – ಯಲ್ಲಮ್ಮನಿಗೆ ಚಿಕಿತ್ಸೆ ನೀಡದಿದ್ದರೂ ಹಾಗೂ ಅವಳಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರ ಬಗ್ಗೆ ಗೊತ್ತಿರದಿದ್ದರೂ, ಆ ನಿಗದಿತ ಸಮಯದಲ್ಲಿ ಅವರು ಆಸ್ಪತ್ರೆಯಲ್ಲಿ ಇದ್ದರು ಎಂಬುದರ ಬಗ್ಗೆ ಯಾವುದೇ ಸಂದೇಹಪಡಲು ಸಾಧ್ಯವಿಲ್ಲ. ಮರಣಕಾಲೀನ ಹೇಳಿಕೆಯನ್ನು ದಾಖಲಿಸಿರುವ ಖಚಿತ ಸಮಯದ ಬಗ್ಗೆ ಗೊತ್ತಿಲ್ಲದಂತೆ ನಟಿಸುತ್ತಿದ್ದರೂ ಕೂಡ, ಅವರು ಯಾವುದೇ ರೀತಿಯಲ್ಲೂ ಕರ್ತವ್ಯದಲ್ಲಿರಲಿಲ್ಲ ಎಂಬುದರ ಬಗ್ಗೆ ತನಗೆ ಸೂಚನೆ ಬಂದಿರುವುದನ್ನು ಗಾಯಾಳುವಿನ ಸ್ಥಿತಿಯ ಬಗ್ಗೆ ಪೊಲೀಸರಿಗೆ ಏನನ್ನೂ ಹೇಳಿಲ್ಲವೆಂಬ ಬಗ್ಗೆ ಹಾಗೂ ತನ್ನ ಕಚೇರಿಯಲ್ಲಿ ನಿಶಾನೆ ಪಿ.16ರಲ್ಲಿ ತನ್ನ ಸಹಿಯನ್ನು ಪಡೆದುಕೊಂಡಿರುವುದನ್ನು ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ.

28. ನಿಶಾನೆ ಪಿ.16, ಆ ನಿರ್ದಿಷ್ಟ ಸಮಯದಲ್ಲಿ ಬೀದರ್‌ನಲ್ಲಿ ವಿಶೇಷ ತಹಸೀಲ್ದಾರಾಗಿ ಕಾರ್ಯ ನಿರ್ವಹಿಸುತ್ತಿದ್ದ, ಪ್ರಾ.ಸಾ.18 ಶ್ರೀಮತಿ ಉಷಾರಾಣಿ, ದಾಖಲಿಸಿರುವರೆಂದು ಹೇಳಲಾದ ಯಲ್ಲಮ್ಮನ ಮರಣಕಾಲೀನ ಹೇಳಿಕೆಯಾಗಿರುತ್ತದೆ. ಯಲ್ಲಮ್ಮನು ಹೇಳಿಕೆಯನ್ನು ನೀಡಲು ಸಮರ್ಥಳಾಗಿದ್ದಾಳೆಂದು ವೈದ್ಯರು ದೃಢೀಕರಿಸಿದ ನಂತರವಷ್ಟೇ ತಾನು ಸರ್ಕಾರಿ ಆಸ್ಪತ್ರೆಯಲ್ಲಿ ದಿನಾಂಕ 18.6.2007ರಂದು ಮಧ್ಯಾಹ್ನ 2.30 ಹಾಗೂ 3.00ಗಂಟೆಯ ನಡುವೆ ಯಲ್ಲಮ್ಮನ ಮರಣ ಕಾಲೀನ ಹೇಳಿಕೆಯನ್ನು ತಾನು ದಾಖಲಿಸಿದ್ದೇನೆಂದು ಹೇಳಿಕೆ ನೀಡಿದ್ದಾಳೆ. ಯಲ್ಲಮ್ಮನ ಹೇಳಿಕೆಯು ಪ್ರಶ್ನೋತ್ತರ ರೂಪದಲ್ಲಿದೆ. ಯಲ್ಲಮ್ಮನ ಹೇಳಿಕೆಯನ್ನು ದಾಖಲಿಸುವುದಕ್ಕೆ

ಸಂಬಂಧಪಟ್ಟಂತೆ ಅವಳ ಮನಃಸ್ಥಿತಿ ಬಗ್ಗೆ ಡಾ॥ ಸುಧೀರ್ ನೀಡಿದ ಹೇಳಿಕೆ ಹಾಗೂ ಅದನ್ನು ದಾಖಲಿಸುವಾಗ ಅವರು ಹಾಜರಿದ್ದ ಬಗ್ಗೆ ಅವಳ ಪ್ರಮಾಣಪತ್ರವನ್ನು ನಿಶಾನೆ. ಪಿ.16 ಹೊಂದಿದೆ. ಯಲ್ಲಮ್ಮನ ಮರಣ ಕಾಲೀನ ಹೇಳಿಕೆಯನ್ನು ಒಳಗೊಂಡ ಲಕೋಟೆಯನ್ನು ಪೊಲೀಸರಿಗೆ ಹಸ್ತಾಂತರಿಸಲಿಲ್ಲ, ಆದರೆ ಅವನ ಹಿಂದೆ ಕರ್ತವ್ಯದಲ್ಲಿದ್ದವನು ನ್ಯಾಯಾಲಯಕ್ಕೆ ಕಳಿಸಿದ್ದರೆಂಬುದು ಹಾಗೂ ಇದಕ್ಕೆ ಮೊಹರು ಹಾಕಲಾಗಿತ್ತೆಂಬುದು ಅವರ ವಾದವಾಗಿದೆ. ಮೊಹರು ಮಾಡಲಾದ ಲಕೋಟೆಯನ್ನು ನಿಶಾನೆ ಪಿ.17ಎಂದು ಗುರುತು ಮಾಡಲಾಗಿದೆ.

29. ಒಪ್ಪಿಕೊಂಡ ಹಾಗೆ, ನಿಶಾನೆ ಪಿ.17ನ್ನು ನ್ಯಾಯಾಲಯದಲ್ಲಿ ತೆರೆಯಲಾಗಿತ್ತು. ಹಾಗೂ ನಿಶಾನೆ ಪಿ.16ಕ್ಕೆ ನ್ಯಾಯಾಲಯದಲ್ಲಿ ಪ್ರಾ.ಸಾ. 18ರ ಮೂಲಕ ಗುರುತು ಮಾಡಿಸಲಾಗಿತ್ತು. ಆರೋಪಿಯ ಪರವಾಗಿ ಹಾಜರಾದ ಮಾನ್ಯ ವಕೀಲರು ಅವಳನ್ನು ದೀರ್ಘವಾದ ಪಾಟೀ ಸವಾಲಿಗೊಡ್ಡಿದ್ದಾರೆ. ಅವಳು, ಮಧ್ಯಾಹ್ನ 1.30ರಲ್ಲಿ ಭೇಮಲ್‌ಖೇಡ ಪೊಲೀಸು ಠಾಣೆಯಿಂದ ಒಂದು ಮನವಿ ಪತ್ರವನ್ನು ಸ್ವೀಕರಿಸಿದೆನೆಂದು, ತಾನು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡೆನೆಂದು ನಂತರ ಪ್ರಕರಣ ನಿರ್ವಾಹಕರೊಂದಿಗೆ ಆಸ್ಪತ್ರೆಗೆ ಹೋದೆನೆಂಬುದು ಅವರ ವಾದವಾಗಿದೆ. ಆ ಸಮಯದಲ್ಲಿ ಯಲ್ಲಮ್ಮನಿಗೆ ವೈದ್ಯರು ಚಿಕಿತ್ಸೆ ನೀಡುತ್ತಿದ್ದರು ಹಾಗೂ ಅವಳ ದೇಹವು ಅಪಾರವಾಗಿ ಬೆಂದು ಹೋಗಿತ್ತು. ಯಲ್ಲಮ್ಮನ ಸಂಬಂಧಿಕರು ಕೊಠಡಿಯ ಒಳಗಿರಲಿಲ್ಲ, ಕೊಠಡಿಯ ಹೊರಗೆ ಇದ್ದರೆಂಬುದು ಅವಳ ವಾದವಾಗಿದೆ. ನಿಶಾನೆ ಪಿ.16ರಲ್ಲಿ ಪೊಲೀಸರಿಂದ ಸ್ವೀಕರಿಸಿರುವ ಮನವಿ ಕುರಿತು ಸೂಚಿಸಿರುವುದಿಲ್ಲ. ಆದರೆ ಸದರಿ ದಸ್ತಾವೇಜಿನ ಅಧಿಕೃತತೆಯನ್ನು ನಂಬದಿರಲು ಯಾವುದೇ ಕಾರಣವಿರುವುದಿಲ್ಲವೆಂಬುದು ನಿಜವಾದ ಸಂಗತಿಯಾಗಿದೆ. ವಾಸ್ತವವಾಗಿ, ಪ್ರಾಸಾ.15 ತಾನು ತಹಸೀಲ್ದಾರ್ – ಪ್ರಾಸಾ 18ನ್ನು ಆಸ್ಪತ್ರೆಗೆ ಹೋಗಲು ಹಾಗೂ ಗಾಯಾಳುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ಮನವಿ ಮಾಡಿದ್ದೇನೆಂದು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾರೆ.

30. ನಿಶಾನೆ ಪಿ.16ರ ಪ್ರಕಾರ, ಮಧ್ಯಾಹ್ನ 2.30 ಹಾಗೂ 3.30ರ ನಡುವೆ ಹೇಳಿಕೆಯನ್ನು ದಾಖಲು ಮಾಡಲಾಗಿತ್ತೆಂದು ಹಾಗೂ ಮರಣ ಕಾಲೀನ ಹೇಳಿಕೆಯಿರುವ

ಲಕೋಟೆಗೆ ವೈದ್ಯರ ಕಚೇರಿಯಲ್ಲಿ ಮೊಹರು ಮಾಡಲಾಗಿತ್ತು ಹಾಗೂ ಲಕೋಟೆಯ ಮೇಲೆ ಯಲ್ಲಮ್ಮ ಕೋಂ ನಾಗಪ್ಪರ ಹೇಳಿಕೆಯೆಂದು ಸೂಚಿಸಲಾಗಿತ್ತು. ಇದು ಪ್ರಾ.ಸಾ. 20ರ ನಿರ್ದಿಷ್ಟ ಪ್ರಕರಣವಾಗಿದ್ದು, ಮೃತರ ಗಂಡನನ್ನು ಅವರು ಭೇಟಿ ಮಾಡಿರಲಿಲ್ಲ. ಪ್ರಾ.ಸಾ. 18 ತಹಶೀಲ್ದಾರ್ ಆಗಿದ್ದು ಆಸಕ್ತಿ ಹೊಂದಿರದ ಸಾಕ್ಷಿದಾರರಾಗಿದ್ದಾರೆ. ಅವಳ ಹಾಜರಾತಿ ಪ್ರಾ.ಸಾ. 20ರ ಹಾಜರಾತಿಯಿಂದಾಗಿ ದಯಪಾಲಿತ ಸಾಕ್ಷ್ಯವಾಗಿದ್ದು, ಪ್ರಾ.ಸಾ. 20 ಡಾ॥ ಸುಧೀರ್ ಕೂಡ ಅನಾಸಕ್ತಿಯುಳ್ಳ ಸಾಕ್ಷಿದಾರರಾಗಿದ್ದಾರೆ. ಗಾಯಾಳುವಿನ ಹೇಳಿಕೆಯನ್ನು ಬೀದರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿಲ್ಲವೆಂಬ ಸೂಚನೆ ಅವರಿಗೆ ಬಂದಿದೆ ಹಾಗೂ ಅವರು ಮರಣಕಾಲೀನ ಹೇಳಿಕೆಯನ್ನು ದಾಖಲಿಸದೆ ತಪ್ಪಾಗಿ ಹೇಳಿಕೆ ನೀಡಿದ್ದಾರೆಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ. ಎರಡು ಪ್ರಮುಖ ಸಾಕ್ಷಿದಾರರು ಎಂದರೆ ಪ್ರಾ.ಸಾ.18 ಹಾಗೂ ಪ್ರಾ.ಸಾ. 20ನ್ನು ನಂಬದೆ ತೆಗೆದುಹಾಕುವಂಥದ್ದೇನೂ ಇಲ್ಲ.

31. ಕನ್ನಡದಲ್ಲಿರುವ ನಿಶಾನೆ ಪಿ.16ನ್ನು ಪರಿಶೀಲಿಸುವುದು ಯುಕ್ತವಾಗಿದೆ. ಈಗಾಗಲೇ ಚರ್ಚಿಸಲಾದಂತೆ, ಇದು ಪ್ರಶ್ನೋತ್ತರ ರೂಪದಲ್ಲಿದೆ. ಇದರ ಭಾಷಾಂತರವನ್ನು ಈ ಕೆಳಗೆ ಮರು ಹಾಜರುಪಡಿಸಲಾಗಿದೆ:

## ಪರಿಶಿಷ್ಟ – III
## ಆದೇಶದ ವಿವರಣೆ ಇತ್ಯಾದಿ
## (ಅಧ್ಯಾಯ 14)

ಪೊಲೀಸು ಉಪ ನಿರೀಕ್ಷಕರ ಪತ್ರದ ಆಧಾರದ ಮೇಲೆ ಬೀದರ್‌ನ ತಹಶೀಲ್ದಾರ್ ಹಾಗೂ ಟಿಇಎಂ ಶ್ರೀಮತಿ ಉಷಾರಾಣಿಯವರು ದಾಖಲಿಸಿದ ಯಲ್ಲಮ್ಮ ಕೋಂ ನಾಗಪ್ಪ ಇವರ ಮರಣ ಕಾಲೀನ ಹೇಳಿಕೆ.

ಬೀದರ್‌ನಲ್ಲಿ ಕನ್ನಡದಲ್ಲಿ ದಾಖಲಿಸಲಾದ ಹೇಳಿಕೆ: 18.6.2007.

| | | |
|---|---|---|
| | ನಿನ್ನ ಹೆಸರೇನು: | ಯಲ್ಲಮ್ಮ ಕೋಂ ನಾಗಪ್ಪ |
| | ತಂದೆಯ ಹೆಸರು | ಗೊತ್ತಿರುವುದಿಲ್ಲ. |
| | ವಯಸ್ಸು: | --- |
| | ಉದ್ಯೋಗ | ಕಲ್ಲು ಒಡೆಯುವ ಕೂಲಿ |
| | ನಿಮ್ಮ ಸ್ವಂತ ಸ್ಥಳದ ಹೆಸರೇನು: | ಭೀಮಲ್‌ಖೇಡ್ |
| 1) | ನೀವು ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದೀರಾ | ಇಲ್ಲ |
| 2) | ನೀವು ಮಾತನಾಡುವ ಸ್ಥಿತಿಯಲ್ಲಿದ್ದೀರಾ | ಸ್ವಲ್ಪ |
| 3) | ನೀನೀಗ ಎಲ್ಲಿದ್ದೀಯಾ? | ಆಸ್ಪತ್ರೆ |
| 4) | ನಿನ್ನನ್ನು ಇಲ್ಲಿಗೆ ಯಾವಾಗ, ಹೇಗೆ ಯಾರು ಕರೆತಂದರು? | ಭೀಮಲ್‌ಖೇಡದ ನಮ್ಮ ಗ್ರಾಮಸ್ಥರು. |
| 5) | ಆ ಸಮಯದಲ್ಲಿ ಯಾರಿದ್ದರು? | ಅತ್ತೆ, ಸೊಸೆ ಮನೆಯಲ್ಲಿದ್ದರು. |
| 6) | ಅವರ ಹೆಸರೇನು? | ಶೆಟ್ಟವ್ವ ಅವರ ಸೊಸೆ ಲಕ್ಷ್ಮಿ |
| 7) | ಅವರನ್ನು ಹೇಗೆ ಗುರುತಿಸುತ್ತೀಯೇ? | ನನ್ನ ಅತ್ತೆ, ಭಾವ – ಮೈದುನ |
| 8) | ನಿನಗೆ ಹೇಗೆ ಗಾಯಗಳಾದವು? | ಮನೆ ಶೋಭಾ ಮತ್ತು ಲಕ್ಷ್ಮಿ ಇಬ್ಬರೂ ನನಗೆ ಬೆಳಿಗ್ಗೆ 11.00 ಗಂಟೆಯಲ್ಲಿ ಬೆಂಕಿ ಹಚ್ಚಿದರು. |
| 9) | ಯಾವ ರೀತಿಯ ಮಾರ್ಗದಲ್ಲಿ ಎಂದು ಹೇಳಬಲ್ಲೆಯಾ? | ಸೀಮೆ ಎಣ್ಣೆ ಸುರಿಯುವ ಮೂಲಕ ಸುಟ್ಟಗಾಯ ಮಾಡಿದರು. |
| 10) | ದೇಹದ ಯಾವ ಭಾಗಗಳಿಗೆ ಗಾಯಗಳಾದವು | ಮುಖ, ಕೈಗಳು, ಎದೆಭಾಗ, ತಲೆಯ ಕೂದಲು, ಹಿಂದಕ್ಕೆ ಸ್ವಲ್ಪ |

| | | |
|---|---|---|
| 11) | ನಿನಗೆ ಗಾಯಗಳಾಗಿವೆಯೆಂಬುದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿರುವೆಯಾ? | ಹೌದು |
| 12) | ನಿನಗೆ ಹೇಗೆ ಗಾಯಗಳಾದವು ಎಂಬ ಬಗ್ಗೆ ಉತ್ತರಿಸಬಲ್ಲೆಯಾ? | ಟೆರ್ರಿಕಾಟ್ ನಿಂದ ಬಟ್ಟೆ ಹೊತ್ತಿಕೊಂಡಿತು. |
| 13) | ಗಾಯಗಳಾಗಲು ಕಾರಣವೇನು? | ಶೋಭಾ, ಲಕ್ಷ್ಮಿ. |

ಎಲ್‌ಟಿಎಂ.

ಪ್ರಾ.ಸಾ.18 ಶ್ರೀಮತಿ ಉಷಾರಾಣಿಯವರ ಆಸ್ಪತ್ರೆಯಲ್ಲಿನ ಹಾಜರಾತಿಯನ್ನು ಪ್ರಾ.ಸಾ.20, ಡಾ॥ ಸುಧೀರ್‌ರವರ ಆವೃತ್ತಿಯ ಮೂಲಕ ನೀಡಿದ್ದಾರೆ. ಸಂಶಯಾತ್ಮಕವಾಗಿ ಕಂಡು ಬಂದಿರುವ ಪ್ರಾ.ಸಾ. 15 ದಾಖಲಿಸಿದ್ದಾರೆಂದು ಹೇಳಲಾದ ಮರಣಕಾಲೀನ ಹೇಳಿಕೆಯು ಹೇಗಿದೆ ಎಂಬುದರ ಬಗ್ಗೆ ಸಮರ್ಪಕ ಕಾರಣಗಳನ್ನು ನೀಡಲಾಗಿದೆ ಹಾಗೂ ಇದು ಮರಣಕಾಲೀನ ಹೇಳಿಕೆಯ ಹಾಗೆ ಇರಲು ಸಾಧ್ಯವಿಲ್ಲ. ಆದರೆ, ನಿಶಾನೆ ಪಿ.16ನ್ನು ಶ್ರೀಮತಿ ಉಷಾರಾಣಿ (ಪ್ರಾ.ಸಾ.18) ಹಾಗೂ ಡಾ॥ ಸುಧೀರ್ (ಪ್ರಾ.ಸಾ.20) ಬರೆದಿರುವ ಸಾಕ್ಷಿಯ ಮೂಲಕ ಅನುಗ್ರಹಿಸಲಾಗಿದೆ. ಹೇಳಿಕೆಯನ್ನು ದಾಖಲಿಸುವ ಸಮಯದಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡುತ್ತಿದ್ದ ಕೊಠಡಿಯೊಳಗೆ ವೈದ್ಯರು ಹಾಗೂ ವಿಷಯ ನಿರ್ವಾಹಕ ಹಾಗೂ ಶ್ರೀಮತಿ ಉಷಾರಾಣಿಯವರನ್ನು ಬಿಟ್ಟರೆ ಮತ್ತಾರೂ ಇರಲಿಲ್ಲ. ಪ್ರಾ.ಸಾ. 18 ಹಾಗೂ 20 ಇಬ್ಬರನ್ನೂ ಕಠಿಣವಾದ ಪಾಟೀ ಸವಾಲಿಗೊಳಪಡಿಸಲಾಗಿದ್ದು ಅವರ ಸಾಕ್ಷ್ಯವನ್ನು ನಂಬದೆ ಇರುವುದಕ್ಕೆ ಯಾವುದೇ ಕಾರಣವಿರಲಿಲ್ಲ.

32. ಈ ಎರಡೂ ಸಾಕ್ಷಿದಾರರ ಒಟ್ಟಾರೆ ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ನಿಶಾನೆ ಪಿ.16ನ್ನು ಮಧ್ಯಾಹ್ನ 2.30 ಹಾಗೂ 3.00 ಗಂಟೆ ನಡುವೆ ದಾಖಲಿಸಲಾಗಿರುತ್ತದೆ ಹಾಗೂ ಗಾಯಾಳು ಯಲ್ಲಮ್ಮ ಯುಕ್ತ ಮನಃಸ್ಥಿತಿಯಲ್ಲಿದ್ದಳು ಎಂಬುದನ್ನು ನಿಶ್ಚಿತತೆಯಿಂದ ಹೇಳಬಹುದಾಗಿರುತ್ತದೆ.

33. ಆರೋಪಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ನ್ಯಾಯಾಲಯದ ಮುಂದೆ ಏನನ್ನು ವಾದಿಸಿದ್ದಾರೆಂದರೆ, ಗಾಯಾಳುವಿಗೆ ಶೇಕಡಾ 95–98ರಷ್ಟು ಸುಟ್ಟ ಗಾಯಗಳಾಗಿದ್ದರಿಂದ ಯಾವುದೇ ಹೇಳಿಕೆಯನ್ನು ಅವಳು ನೀಡಿರಲಾರಳು ಎಂಬುದಾಗಿದೆ. ಈ ಸಂಬಂಧದಲ್ಲಿ ಪ್ರಾ.ಸಾ. 20 ಡಾ॥ ಸುಧೀರ್‌ರವರ ಸಾಕ್ಷ್ಯವು ಪ್ರಸ್ತುತವಾಗುತ್ತದೆ. ಮುಖ್ಯ ವಿಚಾರಣೆಯಲ್ಲಿ, ಅವರು, ಯಲ್ಲಮ್ಮ ಹೇಳಿಕೆಯನ್ನು ನೀಡಲು ಶಕ್ತಳಾಗಿದ್ದಳೆಂದು, ಆದ್ದರಿಂದ ತಹಶೀಲ್ದಾರರು ಅವಳ ಹೇಳಿಕೆಯನ್ನು ದಾಖಲಿಸಿದ್ದರೆಂದು ಹೇಳಿಕೆ ನೀಡಿದ್ದಾರೆ.

34. ಗಾಯಾಳುವಿಗೆ ಸುಟ್ಟಗಾಯಗಳಾಗಿದ್ದ ಕಾರಣ ಯಾವುದೇ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿರಲಿಲ್ಲವೆಂಬ ಭಾವನೆ ಅವರಿಗೆ ಎಲ್ಲೂ ಬಂದಿಲ್ಲ. ಶೇಕಡಾ 95–98ರಷ್ಟು ಸುಟ್ಟಗಾಯಗಳಾಗಿದ್ದರೂ ಸಹ ಅತೀ ಹೆಚ್ಚಿನ ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಗಾಯಾಳು, ಪ್ರಜ್ಞಾಹೀನ ಸ್ಥಿತಿಯಲ್ಲಿ ಅಥವಾ ಹೇಳಿಕೆ ನೀಡಲು ಸೂಕ್ತವಿಲ್ಲದ ಸ್ಥಿತಿಗೆ ಬದಲಾಗಿರಲಿಲ್ಲವೆನ್ನುವ ಭಾವನೆ ಬರುವುದಿಲ್ಲ.

35. ಯಲ್ಲಮ್ಮಳಿಗೆ ಕೇಳಿದ ಪ್ರಶ್ನೋತ್ತರವು, ಅವಳು ಮಾತನಾಡುವ ಸ್ಥಿತಿಯಲ್ಲಿದ್ದಳೆಂಬುದನ್ನು ಪ್ರಕಟಪಡಿಸುತ್ತದೆ. ವಾಸ್ತವವಾಗಿ, ಯಲ್ಲಮ್ಮನ ಮಗ ಬಾಲಪ್ಪನನ್ನು ಕಠಿಣವಾದ ಪಾಟೀ ಸವಾಲಿಗೆ ಒಳಪಡಿಸಲಾಯಿತು. ಅವನು ತನ್ನ ತಾಯಿಯೊಂದಿಗೆ ಮಾತನಾಡಲು ಬೀದರ್ ಆಸ್ಪತ್ರೆಯಲ್ಲಿ ಆ ದಿನದಂದು ಮಧ್ಯಾಹ್ನ 2.00 ಗಂಟೆಗೆ ಅಲ್ಲಿರಲಿಲ್ಲವೆಂದು ಸಂಭವಿಸಿರಬಹುದಾದ ವಿಷಯ ಬಿಟ್ಟರೆ ಅವನ ಬಾಯಿಂದ ಮತ್ತಾವ ವಿಷಯವೂ ಬಂದಿಲ್ಲ. ಅವನು, ತನ್ನ ಹೆಂಡತಿ ಆಸ್ಪತ್ರೆಯಲ್ಲಿರಲಿಲ್ಲವೆಂದು ಹಾಗೂ ತನ್ನ ತಂದೆ ಹಾಗೂ ಗಂಗಮ್ಮ ಆ ಸಮಯದಲ್ಲಿ ಆಸ್ಪತ್ರೆಯಲ್ಲಿದ್ದರೆಂದು ಮತ್ತೆ ಹೇಳಿಕೆ ನೀಡಿದ್ದಾನೆ. ಆ ದಿನ ತಾನು ಹುಮನಾಬಾದ್‌ಗೆ ಹೋಗಿರಲಿಲ್ಲವೆಂದು ಹಾಗೂ ತನ್ನ ತಾಯಿ ತನಗೆ ಏನನ್ನೂ ಹೇಳಿರಲಿಲ್ಲವೆಂದು ಹಾಗೂ ಅವಳು ಸ್ವತಃ ತಾನೇ ಬೆಂಕಿ ಹಚ್ಚಿಕೊಂಡಳೆಂಬ ಸುದ್ದಿ ಬಂತು ಎಂಬ ಅಂಶವನ್ನು ನಿರ್ದಿಷ್ಟವಾಗಿ ನಿರಾಕರಿಸಲಾಗಿದೆ.

36. ಇದರ ಸುತ್ತ ಇರುವ ಸನ್ನಿವೇಶಗಳನ್ನು ಪರಿಗಣಿಸಿ ಬಾಲಪ್ಪನ ಎಲ್ಲಾ ಮೌಖಿಕ ಸಾಕ್ಷ್ಯವನ್ನು ನಿರ್ಧರಿಸಿದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ಬಾಲಪ್ಪನಿಗೆ ನೀಡಿದ ಯಲ್ಲಮ್ಮನ ಮೌಖಿಕ ಮರಣಕಾಲೀನ ಹೇಳಿಕೆಯನ್ನು ಆಧರಿಸಿ ಸಮರ್ಥಿಸಿಕೊಂಡಿದೆಯೆಂದು ಅದು ಯುಕ್ತ ಸಂದೇಹವನ್ನು ಮೀರಿ ರುಜುವಾತುಪಡಿಸಿದೆಯೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

37. ಶ್ರೀಮತಿ ಶೋಭಾ ಯಲ್ಲಮ್ಮನ ಸೊಸೆ ಅವರ ಮನೆಯಲ್ಲಿ ನಾಗಪ್ಪ, ಯಲ್ಲಮ್ಮ, ಬಾಲಪ್ಪ ಹಾಗೂ ಶೋಭಾ ಒಟ್ಟಿಗೆ ವಾಸಿಸುತ್ತಿದ್ದರೆಂದು ಬಾಲಪ್ಪ, ಹಾಗೆಯೇ ಶೋಭಾಳ ಸಾಕ್ಷ್ಯದಿಂದ ವಿಷಯ ತಿಳಿದುಬರುತ್ತದೆ. ಬಾಲಪ್ಪನ ಇತರ ಸಹೋದರರು ಎಂದರೆ ಭೀಮ ಹಾಗೂ ಹನುಮಂತ ಸ್ವಲ್ಪ ಹೆಚ್ಚು ಕಾಲದಿಂದ ಮುಂಬೈನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಭೇಮಲ್‌ಖೇಡದಲ್ಲಿ ಒಟ್ಟಿಗೆ ವಾಸಿಸುತ್ತಿದ್ದ ಶೋಭಾ, ಬಾಲಪ್ಪ, ನಾಗಪ್ಪ ಹಾಗೂ ಯಲ್ಲಮ್ಮರಿಗೆ ಗಂಭೀರವಾದ ವಿವಾದವಿರಲಿಲ್ಲವೆಂಬುದು ವಿಷಯವಾಗಿದೆ. ಶೋಭಾ ಹೇಳಿಕೆ ನೀಡಿರುವುದು ಏನೆಂದರೆ, ಆರೋಪಿತ ವ್ಯಕ್ತಿಗಳು, ತಾವು ಹುಣಸೆಮರವನ್ನು ಕಡಿಯುವ ಸಂಬಂಧದಲ್ಲಿ ತಮ್ಮ ಅತ್ತೆಯೊಂದಿಗೆ ಜಗಳ ಮಾಡಿದರು ಹಾಗೂ ಗಾಯಾಳುವನ್ನು ಹೆದರಿಸಿದರು ಎಂಬುದಾಗಿದೆ. ಆರೋಪಿತರು ತಮ್ಮ ಮನೆಗೆ ಬಂದು ಸೀಮೆಎಣ್ಣೆ ಸುರಿದರು ಹಾಗೂ ಲಕ್ಷ್ಮಿ ಅವಳಿಗೆ ಬೆಂಕಿ ಹಚ್ಚಿದಳು ಎಂದು ಅವಳು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾಳೆ. ಅವಳು ಮನೆಯ ಹೊರಗೆ ಬಂದು ಕಿರುಚಿಕೊಳ್ಳುತ್ತಿರುವಾಗ ಆರೋಪಿ ಓಡಿ ಹೋದಳು. ಕೂಡಲೇ ನನ್ನ ಮಾವ ಹಾಗೂ ಗಂಗಮ್ಮ ನಮ್ಮ ಮನೆಗೆ ಬಂದು ನೀರನ್ನು ಸುರಿದು ಭೇಮಲ್‌ಖೇಡದ ಆಸ್ಪತ್ರೆಗೆ ಗಾಯಾಳುವನ್ನು ಕೊಂಡೊಯ್ದರು.

38. ಸಾಕ್ಷಿದಾರರ ಸಾಕ್ಷ್ಯವು ಪಾಟೀ ಸವಾಲಿಗೊಳಪಟ್ಟಿರುತ್ತದೆ. ಅವಳು ತಮ್ಮ ಮನೆಯ ಸುತ್ತ ಮುತ್ತ 8–10 ಮನೆಗಳಿವೆಯೆಂದು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾಳೆ. ತಮ್ಮ ಹಾಗೂ ಆರೋಪಿತರ ಮಧ್ಯೆ ಭೂ ವಿವಾದವಿತ್ತೆಂಬುದನ್ನು ಅವಳು ಒಪ್ಪಿಕೊಂಡಿದ್ದಾಳೆ. ಆದ್ದರಿಂದ ಆರೋಪಿಗಳ

ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಈ ವಿವಾದದ ಕಾರಣದಿಂದ ಅವರು ತಪ್ಪಾಗಿ ಆರೋಪ ಹೊರಿಸಿರುವರೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ. ಪ್ರೇರೇಪಣೆಯು ಎರಡು ಬಾಯಿಯುಳ್ಳ ಕತ್ತಿಯಾಗಿರುತ್ತದೆ. ಇದು ತಪ್ಪು ದೋಷಾರೋಪಣೆ ಹೊರಿಸುತ್ತದೆ ಅಥವಾ ಅಪರಾಧ ಮಾಡುವಂತೆ ಮಾಡುತ್ತದೆ. ನಾಗಪ್ಪನು ಯಲ್ಲಮ್ಮನನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲವೆಂದು ಹಾಗೂ ಎಲ್ಲಾ ಆಸ್ತಿಯನ್ನು ಮಾರಿದ್ದನೆಂದು, ಆದ್ದರಿಂದ ಅವರು ಆಗಾಗ ಒಬ್ಬರಿಗೊಬ್ಬರು ಜಗಳ ಮಾಡಿಕೊಳ್ಳುತ್ತಿದ್ದರೆಂದು, ಆದ್ದರಿಂದ ಅವನ ಈ ವರ್ತನೆಯಿಂದ ಬೇಸತ್ತು, ಅವಳು ತಾನೇ ಬೆಂಕಿ ಹಚ್ಚಿಕೊಳ್ಳುವ ಭಾವನೆ ಅವಳಿಗೆ ಬಂದಿರುತ್ತದೆ. ಈ ಭಾವನೆಯನ್ನು ನಿರ್ದಿಷ್ಟವಾಗಿ ತಿರಸ್ಕರಿಸಲಾಗಿದೆ. ಪ್ರಮುಖ ಸಾಕ್ಷಿದಾರರು ಈ ಭಾವನೆಯ ಲವಲೇಶವನ್ನೂ ತಮ್ಮ ಬಾಯಿಂದ ಹೊರಗೆಡಹಿರುವುದಿಲ್ಲ.

39. ಸೀಮೆಎಣ್ಣೆಯನ್ನು ಸುರಿದಿದ್ದು ಹಾಗೂ ನಂತರ ಬೆಂಕಿ ಹಚ್ಚಿದ ಕಾರಣದಿಂದ ಸುಟ್ಟಗಾಯಗಳಾಗಿ ಯಲ್ಲಮ್ಮನ ಸಾವು ಸಂಭವಿಸಿದೆ ಎಂಬ ಸಂಗತಿಯಲ್ಲಿ ಯಾವುದೇ ವಿವಾದ ವಿರುವುದಿಲ್ಲ. ಶೋಭಾಳನ್ನು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ ಅವಳು ಈ ಘಟನೆ ನಡೆಯುವುದಕ್ಕೂ ಮೊದಲು ಎಂದೂ ತಮ್ಮ ಮನೆಗೆ ಆರೋಪಿಗಳು ಬಂದಿರಲಿಲ್ಲವೆಂದು ಹಾಗೂ ತಮ್ಮ ಮನೆಯಲ್ಲಿ ದೊರಕುವ ವಸ್ತುಗಳು ಅವರಿಗೆ ಗೊತ್ತಿರಲಿಲ್ಲವೆಂದು ತಿಳಿಸಿದ್ದಾಳೆ. ಆರೋಪಿತ ವ್ಯಕ್ತಿಗಳು ತನ್ನನ್ನು ನೂಕಿಕೊಂಡು ಮನೆಯನ್ನು ಪ್ರವೇಶಿಸಿದರೆಂದು ಹಾಗೂ ಅವರು ಒಳಗೆ ಬಂದಾಗ ನಾನು ಮನೆಯಿಂದಾಚೆಗೆ ಬಂದೆನೆಂದು ತಿಳಿಸಿದ್ದಾಳೆ. ತಮ್ಮ ಮನೆಯ ಪಕ್ಕದಲ್ಲಿ 2/3 ಮನೆಗಳಿವೆಯೆಂದು, ನನ್ನ ತಾಯಿ ಗಂಗಮ್ಮನ ಮನೆಯಲ್ಲಿ ಕುಳಿತಿದ್ದಳೆಂದು ಹಾಗೂ ತಾನು ಅವರನ್ನು ಕರೆತಂದೆನೆಂಬುದು ಅವಳ ವಾದವಾಗಿದೆ. ಅವಳು ಸೀಮೆಎಣ್ಣೆಯನ್ನು ತನ್ನ ಅತ್ತೆಯ ಮೇಲೆ ಸುರಿಯುತ್ತಿರುವುದನ್ನು ಹಾಗೂ ಲಕ್ಷ್ಮಿ ಬೆಂಕಿ ಕಡ್ಡಿಯಿಂದ ಬೆಂಕಿಕಡ್ಡಿ ಗೀರಿ ಹೊತ್ತಿಸುತ್ತಿರುವುದನ್ನು ತಾನು ನೋಡಿದೆನೆಂದು ಅವಳು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾಳೆ.

40. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ವಾದಿಸಲು ಕೋರಿರುವುದೇನೆಂದರೆ ಗಾಯಾಳುವನ್ನು ರಕ್ಷಿಸುವುದು ಸಾಮಾನ್ಯ ಪ್ರವೃತ್ತಿಯಾಗಿರುತ್ತದೆ.

ಶೋಭಾ ಆ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಬೇರೆ ಬೇರೆ ವ್ಯಕ್ತಿಗಳು, ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿ ವರ್ತಿಸುತ್ತಾರೆ ಎಂಬುದಾಗಿದೆ. ಅವಳು ತನ್ನ ಅತ್ತೆಗೆ ಬೆಂಕಿ ಹಚ್ಚಿರುವ ಗಳಿಗೆಯನ್ನು ನೋಡಿದ್ದಾರೆ, ಅವಳು ಮನೆಯಿಂದಾಚೆ ಬಂದು ಜನರ ಸಹಾಯವನ್ನು ಪಡೆದುಕೊಳ್ಳುವ ಸಲುವಾಗಿ ಕಿರುಚಿಕೊಂಡಿದ್ದಾಳೆ. ಅವಳ ತಾಯಿ ಹಾಗೂ ಮಾವ ಮನೆಗೆ ಬಂದು ಯಲ್ಲಮ್ಮನನ್ನು ರಕ್ಷಿಸಲು ಪ್ರಯತ್ನಿಸಿದರೆಂಬುದು ಅವಳ ನಿರ್ದಿಷ್ಟ ವಾದವಾಗಿದೆ. ಅವಳ ಅತ್ತೆ ಮಾತನಾಡಲು ಶಕ್ತಳಾಗಿರಲಿಲ್ಲವೆಂಬ ಅವಳ ಭಾವನೆಯನ್ನು ನಿರ್ದಿಷ್ಟವಾಗಿ ತಿರಸ್ಕರಿಸಲಾಗಿದೆ. ವಾಸ್ತವವಾಗಿ, ಶೋಭಾಳನ್ನು ಕಠಿಣತರವಾದ ಪಾಟೀ ಸವಾಲಿಗೂ ಸಹ ಒಳಪಡಿಸಲಾಯಿತು. ಅವಳು ಮೃತರ ಸೊಸೆಯಾಗಿರುವುದರಿಂದಲೇ ಅವಳ ಸಾಕ್ಷ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುವುದಿಲ್ಲ. ಅವಳ ಸಾಕ್ಷ್ಯವನ್ನು ಎಚ್ಚರಿಕೆಯಿಂದ ನಿರ್ಧರಿಸುವುದು ಎಚ್ಚರಿಕೆ ಪತ್ರವಾಗಿದೆ.

41. ಶೋಭಾಳ ಸಾಕ್ಷ್ಯವನ್ನು ಹಾಗೂ ಸುತ್ತಮುತ್ತಲ ಸಂದರ್ಭವನ್ನು ನೋಡಿದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ಪ್ರಶ್ನಿತ ಘಟನೆಗೆ ಅವಳು ಪ್ರತ್ಯಕ್ಷ ಸಾಕ್ಷಿಯಾದ್ದರಿಂದ ಅವಳ ಸಾಕ್ಷ್ಯವನ್ನು ಆಧರಿಸಿ ಸಮರ್ಥಿಸಿಕೊಂಡಿದೆಯೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಹಾಗಾಗಿ ಅಧಿವಿಚಾರಣಾ ನ್ಯಾಯಾಲಯವು, ಪ್ರಾ.ಸಾ.20, ಡಾ॥ ಸುಧೀರ್ ರವರ ಸಮ್ಮುಖದಲ್ಲಿ ಉಷಾರಾಣಿ (ಪ್ರಾ.ಸಾ. 18) ದಾಖಲಿಸಿದ ನಿಶಾನೆ ಪಿ.16, ಮರಣ ಕಾಲೀನ ಘೋಷಣೆಯನ್ನು ಆಧರಿಸಿ ಸುಮರ್ಥಿಸಿಕೊಂಡಿದೆ ಹಾಗೂ ಪ್ರಾ.ಸಾ. 10ರ ಬಾಲಪ್ಪ ಹಾಗೂ ಅವನ ಹೆಂಡತಿ ಶೋಭಾ (ಪ್ರಾ.ಸಾ.11) ಸಾಕ್ಷ್ಯವನ್ನು ಆಧರಿಸಿ ಮತ್ತೇ ಸಮರ್ಥಿಸಿಕೊಂಡಿದೆ. ಇಲ್ಲಿ ಕೆಲವು ಬೇರೆ ಬೇರೆ ಅಸಂಗತತೆಗಳು ಇದ್ದರೂ ಕೂಡ ಅವರು ಪ್ರಕರಣದ ತಳಮಟ್ಟಕ್ಕೆ ಹೋಗಿಲ್ಲ ಹಾಗೂ ಇನ್ನುಳಿದಂತೆ ಅವರ ಸಾಕ್ಷ್ಯವನ್ನು ಒಪ್ಪಿಕೊಳ್ಳಬಹುದಾಗಿದೆ. ಆದ್ದರಿಂದ ಪರಿಶೀಲನಾಂಶ ಸಂ.(2)ಕ್ಕೆ ಸಕಾರಾತ್ಮಕವಾಗಿ ಉತ್ತರ ನೀಡಲಾಗಿದೆ.

42. **<u>ಪರಿಶೀಲನಾಂಶ ಸಂ.(3):</u>** ಈ ನ್ಯಾಯಾಲಯದ ಮುಂದೆ ಏನನ್ನು ವಾದಿಸಲಾಗಿದೆ ಎಂದರೆ, ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ

ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಆರೋಪಿಗಳ ಅಪರಾಧ ನಿರ್ಣಯ ಮಾಡಿರುವುದನ್ನು ಸಮರ್ಥಿಸಿಲ್ಲ ಎಂಬುದಾಗಿದೆ ಹಾಗೂ ಭಾರತ ದಂಡ ಸಂಹಿತೆಯ 4 ರಿಂದ 300ನೇ ಪ್ರಕರಣದೊಂದಿಗೆ ಹೊರತುಪಡಿಸಲಾಗಿದೆಯೆಂದು, ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಇದನ್ನು ನೇರವಾಗಿ ಅನ್ವಯಿಸಬಹುದು ಎಂಬುದಾಗಿದೆ. ಈ ಸಂಬಂಧದಲ್ಲಿ, ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ***ಕೆ. ರವಿಕುಮಾರ್ –ವಿರುದ್ಧ– ಕರ್ನಾಟಕ ರಾಜ್ಯ***[3] ಪ್ರಕರಣದಲ್ಲಿ ಸಲ್ಲಿಸಲಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಆಧರಿಸಿದ್ದು, ಇದರಲ್ಲಿ, ಅಪರಾಧ ಮಾಡುವಲ್ಲಿ ಪೂರ್ವ – ಆಲೋಚನೆ ಇರದಿದ್ದರೆ ಹಾಗೂ ಪ್ರೇರೇಪಣೆ ಅಥವಾ ಶತೃತ್ವ ಇಲ್ಲದಿದ್ದರೆ ಮತ್ತು ತಕ್ಷಣದ ಜಗಳದಿಂದ ಅಥವಾ ಪ್ರಚೋದನೆಯಿಂದ ಘಟನೆ ಸಂಭವಿಸಿ ಅದರ ಪರಿಣಾಮದಿಂದ ಸಾವು ಸಂಭವಿಸಿದ್ದರೆ, ಅದು ದಂಡನೀಯವಾದ ನರಹತ್ಯೆಯಾಗುತ್ತದೆಯೇ ಹೊರತು ಅದು ಕೊಲೆಗೆ ಸಮನಾಗುವುದಿಲ್ಲ.

43. ***ರವಿಕುಮಾರ್*** ರವರ ಪ್ರಕರಣದ (ಮೇಲಿನ) ಸಂಗತಿಗಳ ಪ್ರಕಾರ, ಪ್ರಾ.ಸಾ.2 ಎಂದು ವಿಚಾರಣೆ ಮಾಡಲಾದ ಲಕ್ಷ್ಮಿಯವರ ಮಗಳು ಪದ್ಮಳನ್ನು ರವಿಕುಮಾರ್ ವಿವಾಹವಾಗಿದ್ದರು. ಅವನ ವಿವಾಹದ ಸಮಯದಲ್ಲಿ ರವಿಕುಮಾರ್ ಕೆ.ಎಸ್.ಆರ್.ಪಿಯಲ್ಲಿ ತರಬೇತಿ ಪಡೆಯುತ್ತಿರುವ ಪೇದೆಯಾಗಿದ್ದು, ನಂತರ ಬೆಂಗಳೂರಿಗೆ ಅವರನ್ನು ನಿಯೋಜಿಸಲಾಗಿತ್ತು. ಅವರು ತಮ್ಮ ಹೆಂಡತಿ ಕಡೆಯ ಸಂಬಂಧಿಕರೊಂದಿಗೆ ವಾಸಿಸುತ್ತಿದ್ದರು. 1996ರಲ್ಲಿ ಈ ದಂಪತಿಗೆ ಒಂದು ಮಗುವಾಗಿತ್ತು ಹಾಗೂ ಅವನು ಮಂಡ್ಯದಲ್ಲಿರುವ ತನ್ನ ಪೋಷಕರ ಮನೆಗೆ ತನ್ನ ಕುಟುಂಬವನ್ನು ಸ್ಥಳಾಂತರಿಸಿದ್ದನು. ಆದಾದ ಕೆಲವು ಸಮಯದ ನಂತರ ಅವನು, ಎರಡನೇ ಮಗುವಿನ ಹೆರಿಗೆಗಾಗಿ ಅವಳ ಪೋಷಕರ ಮನೆಗೆ ತನ್ನ ಹೆಂಡತಿಯನ್ನು ಕಳಿಸಿದ್ದನು. ಈ ನಡುವೆ ರವಿಕುಮಾರ್‌ಗೆ ಮೈಸೂರಿಗೆ ವರ್ಗಾವಣೆಯಾಗಿತ್ತು ಹಾಗೂ ಅವನು ತನ್ನ ಕುಟುಂಬವನ್ನು ಕುರುಬರ ಹಳ್ಳಿ ಗ್ರಾಮಕ್ಕೆ ವರ್ಗಾಯಿಸಿದ್ದನು. 11.08.2004ರಂದು ಅವನ ವಯಸ್ಸಾದ ತಂದೆಯು

3. 2015(1) ಅಪರಾಧಗಳು 7(ಎಸ್‌ಸಿ)

ಗಂಭೀರವಾಗಿ ಅಸ್ವಸ್ಥರಾಗಿದ್ದರೆಂಬ ಸಂದೇಶ ಬಂದಿತ್ತು. ರವಿಕುಮಾರ್‌ನು ಮಂಡ್ಯದಲ್ಲಿರುವ ತನ್ನ ತಂದೆಯ ಜೊತೆಗಿರಲು ಹೆಂಡತಿ ಪದ್ಮಳನ್ನು ಕೇಳಿದ್ದಾನೆ. ಆದರೆ ಪದ್ಮ ಒಪ್ಪಿಕೊಂಡಿಲ್ಲ ಹಾಗೂ ನಂತರದ ದಿನ ಹೋಗೋಣವೆಂದು ಅವನಿಗೆ ಹೇಳಿದ್ದಾಳೆ. ಈ ವಿಷಯದಿಂದ ಮಾತಿನ ಘರ್ಷಣೆ ನಡೆದು ಅಂತಿಮವಾಗಿ ಅಪೀಲುದಾರ ರವಿಕುಮಾರ್ ತನ್ನ ಮನಃಸ್ಥಿಮಿತವನ್ನು ಕಳೆದುಕೊಂಡು, ಪದ್ಮಳನ್ನು ಚಾಕುವಿನಿಂದ ಇರಿದು ಸೀಮೆಎಣ್ಣೆ ಸುರಿದಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ತನ್ನ ಹೆಂಡತಿಯನ್ನು ಮನೆಯಲ್ಲೇ ಬಿಟ್ಟು, ತನ್ನ ಎರಡು ಗಂಡು ಮಕ್ಕಳನ್ನು ಕರೆದುಕೊಂಡು ತನ್ನ ಅಸ್ವಸ್ಥನಾಗಿರುವ ತಂದೆಯನ್ನು ನೋಡಲು ಹೋಗಿದ್ದಾನೆ. ಮಕ್ಕಳಿಗೆ 20/–ರೂ. ಹಾಗೂ 10/–ರೂ.ಗಳನ್ನು ಕೊಟ್ಟು ನಡೆದ ಘಟನೆಯನ್ನು ಯಾರಿಗೂ ತಿಳಿಸಬಾರದೆಂದು ಹೇಳಿದನೆಂದು ಆಪಾದಿಸಲಾಗಿದೆ.

44. ಎರಡು ದಿನಗಳ ನಂತರ ರವಿಕುಮಾರ್ ತನ್ನ ಮಕ್ಕಳೊಂದಿಗೆ ವಾಸವಾಗಿದ್ದಾನೆ ಹಾಗೂ ಪದ್ಮ ಒಬ್ಬಳೇ ಇರುವಳೆಂದು ನಂಬಿಸುವ ಪ್ರಯತ್ನ ಮಾಡಿದ್ದು, ನೆರೆಹೊರೆಯವರಿಗೆ ಕರೆ ಮಾಡಿದ್ದಾನೆ. ತರಬೇತಾದ ಕೆಲಸಗಾರರ ಸಹಾಯದಿಂದ ಬಾಗಿಲ ಬೀಗವನ್ನು ತೆಗೆದಿದ್ದಾನೆ ಹಾಗೂ ಅವರು ಸುಟ್ಟುಹೋದ ಪದ್ಮಳ ದೇಹವನ್ನು ನೋಡಿದ್ದಾರೆ. ಯಾರೋ ಒಬ್ಬರು, ಬೆಂಗಳೂರಿನಲ್ಲಿದ್ದ ಆತನ ಹೆಂಡತಿಯ ಸೋದರನಿಗೆ ಈ ವಿಷಯವನ್ನು ತಿಳಿಸಿದ್ದಾರೆ, ಪದ್ಮಾಳನ್ನು ಕೆ.ಆರ್. ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ ಹಾಗೂ ಮಾಹಿತಿಯನ್ನು ಪಡೆದುಕೊಂಡ ನಂತರ ಪದ್ಮಳ ತಾಯಿ ಲಕ್ಷ್ಮಿ, ತನ್ನ ಮಗ ಹಾಗೂ ಕಿರಿಯ ಸಹೋದರನೊಂದಿಗೆ ಕುರುಬರ ಹಳ್ಳಿಗೆ ಅವಸರವಸರವಾಗಿ ಧಾವಿಸಿದ್ದಾಳೆ. ಅಲ್ಲಿ ಅವಳು ಪದ್ಮಳ ಬೆಂದುಹೋದ ಶರೀರವನ್ನು ನೋಡಿದ್ದಾಳೆ. ಮಕ್ಕಳನ್ನು ನಿರ್ದಿಷ್ಟವಾಗಿ ನಂದನ್‌ನನ್ನು ವಿಚಾರಿಸಿದ ಮೇಲೆ ಗಾಯಾಳುವಿನ ಹಿರಿಯ ಮಗ ಸಂಪೂರ್ಣ ಘಟನೆಯನ್ನು ವಿವರಿಸಿದ್ದಾನೆ. ಅದರ ಆಧಾರದ ಮೇಲೆ ನಜರ್‌ಬಾದ್ ಪೊಲೀಸು ಠಾಣೆಗೆ ಲಕ್ಮಿಯು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾಳೆ. ನಿರ್ಣಾಯಕ ತನಿಖೆ ನಡೆಸಿದ ನಂತರ ಭಾರತೀಯ ದಂಡ ಸಂಹಿತೆಯ 302 ಹಾಗೂ 498ಎ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ದೋಷಾರೋಪ ಪಟ್ಟಿಯನ್ನು ದಾಖಲಿಸಲಾಗಿದೆ.

45. ಸದರಿ ಪ್ರಕರಣದಲ್ಲಿ ಅಪೀಲುದಾರನು, ಎಂದರೆ ರವಿಕುಮಾರ್‌ನನ್ನು ಸೆಷನ್ಸ್ ನ್ಯಾಯಾಧೀಶರು ಅಪರಾಧಿಯೆಂದು ನಿರ್ಣಯಿಸಿದ್ದರು. ಕ್ರಿಮಿನಲ್ ಎ. 689/06ರಲ್ಲಿ ಈ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಅಪೀಲನ್ನು ವಜಾಗೊಳಿಸಲಾಗಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದಿಸಲಾಗಿದ್ದ ವಾದವೇನೆಂದರೆ, ಸದರಿ ಪ್ರಕರಣವು, ಭಾರತೀಯ ದಂಡ ಸಂಹಿತೆಯ 4ನೇ ಪ್ರಕರಣದಿಂದ 300ನೇ ಪ್ರಕರಣದವರೆಗೆ ಹೊರತುಪಡಿಸುವುದರ ಅಡಿಯಲ್ಲಿ ಬರುತ್ತದೆಂದು ಹಾಗೂ ತಕ್ಷಣದ ಜಗಳದ ಕಾರಣದಿಂದ ಘಟನೆ ನಡೆದಿದೆಯೆಂದು ಇದನ್ನು ಖಚಿತಪಡಿಸಲಾಗಿದ್ದು ಇಲ್ಲಿ ಯಾವುದೇ ಪೂರ್ವ ಆಲೋಚನೆಯಿಲ್ಲ ಎಂಬುದಾಗಿದೆ. ಪದ್ಮಳನ್ನು ಇರಿದು, ಸೀಮೆಎಣ್ಣೆ ಸುರಿದು ಅವಳಿಗೆ ಬೆಂಕಿ ಹಚ್ಚಿರುವುದು, ಅಂಥ ಜಗಳದಿಂದ ಕೋಪೋದ್ರಿಕ್ತಗೊಂಡು ಉದ್ವೇಗದಲ್ಲಿ ಅದನ್ನು ಮಾಡಲಾಗಿತ್ತು ಎಂದು ವಾದಿಸಲಾಗಿತ್ತು.

46. ಭಾರತೀಯ ದಂಡ ಸಂಹಿತೆಯ 300ನೇ ಪ್ರಕರಣವು ಈ ನಾಲ್ಕರಿಂದ ಹೊರತಾಗಿದ್ದು ಇದನ್ನು ಈ ಮುಂದಿನಂತೆ ಮರು ದಾಖಲಿಸಲಾಗಿದೆ:

> 300. **ಕೊಲೆ**: ಇದರಲ್ಲಿ ಇನ್ನು ಮುಂದೆ ಹೊರತುಪಡಿಸಿದ ಪ್ರಕರಣಗಳಲ್ಲಿ ಹೊರತುಪಡಿಸಿರುವುದು ಯಾವ ಕೃತ್ಯದಿಂದ ಮರಣ ಉಂಟಾಗಿದೆಯೋ ಅದು ಮರಣಕ್ಕೆ ಕಾರಣವಾಗುವ ಉದ್ದೇಶದಿಂದ ಮಾಡಲಾದ ಕಾರಣದಿಂದ ಮರಣ ಉಂಟಾಗಿದ್ದರೆ ಅದು ಕೊಲೆಯಾಗುತ್ತದೆ.
>
> (ಹೊರತುಪಡಿಸಲಾದುದು) ವಿನಾಯಿತಿ 1: – – – –
>
> (ಹೊರತುಪಡಿಸಲಾದುದು) ವಿನಾಯಿತಿ 2: – – – –
>
> (ಹೊರತುಪಡಿಸಲಾದುದು) ವಿನಾಯಿತಿ 3: – – – –

(ಹೊರತುಪಡಿಸಲಾದುದು) ವಿನಾಯಿತಿ 4: ತಕ್ಷಣದ ಜಗಳದಿಂದ ಕೋಪೋದ್ರಿಕ್ತಗೊಂಡು ತಕ್ಷಣ ಗಲಾಟೆಯಾಗಿ ಯಾವುದೇ ಪೂರ್ವ ಆಲೋಚನೆಯಿಲ್ಲದೆ ಅದು ಸಂಭವಿಸಿದ್ದರೆ ಹಾಗೂ ಅಯುಕ್ತವಲ್ಲದ ಮೇಲುಗೈ ಸಾಧಿಸಿರದ ಅಪರಾಧಿಯಾಗಿರದಿದ್ದರೆ ಅಥವಾ ಕ್ರೂರವಾಗಿ ಅಥವಾ ಅಸಹಜ ರೀತಿಯಲ್ಲಿರದಿದ್ದರೆ ಅದು ಕೊಲೆಯಾಗದೆ ದಂಡನೀಯ ನರಹತ್ಯೆ ಆಗುತ್ತದೆ.

300ನೇ ಪ್ರಕರಣದಿಂದ ಹೊರತುಪಡಿಸಲು ಸುಮಾರು ಆರು ದೃಷ್ಟಾಂತಗಳನ್ನು ನೀಡಲಾಗಿದೆ.

47. **ರವಿಕುಮಾರ್‌ರವರ** (ಮೇಲಿನ) ಪ್ರಕರಣದಲ್ಲಿನ ಸಂಗತಿಗಳ ಪ್ರಕಾರ ಯಾವುದೇ ಸಮಯದಲ್ಲೂ ದಂಪತಿಗಳ ನಡುವೆ ಯಾವುದೇ ಶತೃತ್ವ ಇರಲಿಲ್ಲ. ಮಂಡ್ಯಕ್ಕೆ ಹೋಗಲು ಪದ್ಮಳಿಗೆ ಮನಸ್ಸಿಲ್ಲದ ಕಾರಣದಿಂದ ಮಾತಿನ ಘರ್ಷಣೆ ಆಗಿದೆ. ತನ್ನ ಅಸ್ವಸ್ಥ ತಂದೆಯನ್ನು ನೋಡಲು ಅವನೊಂದಿಗೆ ಹೋಗುವುದನ್ನು ಅವಳು ನಿರಾಕರಿಸಿದುದರಿಂದ ಕೋಪಗೊಂಡಿರುವ ಅವನು ಅವಳನ್ನು ಇರಿದು ಸೀಮೆಎಣ್ಣೆ ಸುರಿದಿದ್ದಾನೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ, ಆಪಾದಿತರು, ಮೃತರ ಹಾಗೂ ಇತರ ಕುಟುಂಬದ ಸದಸ್ಯರ ವಿರುದ್ಧ ಪ್ರಕರಣವನ್ನು ದಾಖಲಿಸಿರುವರು ಹಾಗೂ ಇದರ ಕಾರಣಕ್ಕೆ ನಿರ್ದಿಷ್ಟ ಒಪ್ಪಿಗೆ ಇರುವುದಿಲ್ಲ. ಅವರು ಮಾತಾಡಿರುವುದಿಲ್ಲ ಹಾಗೂ ಒಳಗಿನ ದ್ವೇಷಕ್ಕೆ ಸಾಕ್ಷ್ಯವಿತ್ತು. ಮೃತರ, ಆಪಾದಿತರ ಮಧ್ಯೆ ಮಾತಿನಲ್ಲಿ ಒಬ್ಬರಿಗೊಬ್ಬರು ಬೈದುಕೊಂಡಿದ್ದರು ಹಾಗೂ ನಾಗಪ್ಪ ತನ್ನ ಹೆಂಡತಿಗೆ ಮನೆಗೆ ಕಳುಹಿಸಿದೆನೆಂದು ತಿಳಿಸಿದ್ದಾನೆ. ಆದಾದ ಸ್ವಲ್ಪ ಸಮಯದ ನಂತರ ಇಬ್ಬರೂ ಆಪಾದಿತರು ಮನೆಯೊಳಗೆ ಹೋಗಿ ಸೀಮೆಎಣ್ಣೆ ಸುರಿದು ಅವಳಿಗೆ ಬೆಂಕಿ ಹಚ್ಚಿದ್ದಾರೆ. ಹಾಗಾಗಿ ಪ್ರಸ್ತುತ ಪ್ರಕರಣದ ಸಂಗತಿಗಳು, ರವಿಕುಮಾರ್ ಪ್ರಕರಣದಲ್ಲಿ ಬರುವ ಸಂಗತಿಗಳು ಸ್ಪಷ್ಟವಾಗಿ ಬೇರೆ ಬೇರೆಯಾಗಿವೆ.

48. ಸದರಿ ಪ್ರಕರಣದಲ್ಲಿ, ಪ್ರಾಸಿಕ್ಯೂಷನ್ನು, ದಂಪತಿ ಮಧ್ಯೆ ಕಳೆದ 9 ವರ್ಷಗಳಲ್ಲಿ ಯಾವುದೇ ರೀತಿಯ ನಿರಂತರ ಜಗಳ ನಡೆದಿರುವುದನ್ನು ರುಜುವಾತುಪಡಿಸಲು ಯಾವುದೇ ಸಾಕ್ಷಿಯನ್ನು ಮುಂದಿಟ್ಟಿರುವುದಿಲ್ಲ. ಆದ್ದರಿಂದ ಸದರಿ ನಿರ್ಣಯವನ್ನು ಈ ಪ್ರಕರಣದ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲ ಹಾಗೂ ಆಪಾದಿತರು, ಸಂಜ್ಞೇಯವಾಗಬಹುದಾದ ಅಪರಾಧವನ್ನು ನಡೆಸುವ ಉದ್ದೇಶದಿಂದ ಮನೆಯೊಳಗೆ ಅತಿಕ್ರಮಪ್ರವೇಶ ಮಾಡಿರುವುದರಿಂದ 448ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆಪಾದಿತರ ಅಪರಾಧ ನಿರ್ಣಯವನ್ನು ಅಧಿವಿಚಾರಣಾ ನ್ಯಾಯಾಲಯವು, ಸಮರ್ಥಿಸಿಕೊಂಡಿದೆ. ನಮ್ಮ ಮುಂದಿರುವ ಪ್ರಕರಣವು, ಭಾರತೀಯ ದಂಡ ಸಂಹಿತೆಯ 300ನೇ ಪ್ರಕರಣದಿಂದ ಹೊರತುಪಡಿಸುವ ಯಾವೊಂದರ ವ್ಯಾಪ್ತಿಯೊಳಗೂ ಬರುವುದಿಲ್ಲ. ಆದ್ದರಿಂದ ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ಆಪಾದಿತರ ಅಪರಾಧ ನಿರ್ಣಯವನ್ನು ಸಮರ್ಥಿಸಿಕೊಂಡಿತ್ತು. ತದನುಸಾರವಾಗಿ, ಪರಿಶೀಲನಾಂಶ ಸಂ.(3)ಗೆ ಸಕಾರಾತ್ಮಕವಾಗಿ ಉತ್ತರಿಸಿದೆ.

49. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಇಬ್ಬರೂ ಆಪಾದಿತರು ಮಹಿಳೆಯರಾಗಿದ್ದು, ಬಡವರಾಗಿದ್ದಾರೆ ಹಾಗೂ ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗದಿಂದ ಬಂದವರಾಗಿದ್ದಾರೆಂದು ಭಾವಾವೇಶ ಪೂರ್ಣವಾಗಿ ವಾದಿಸಿದ್ದಾರೆ. ವಾಸ್ತವವಾಗಿ, ಭಾರತೀಯ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ವ್ಯಕ್ತಿಯ ಅಪರಾಧ ನಿರ್ಣಯ ಮಾಡುವಾಗ ಹಾಗೂ ನಮ್ಮ ಮುಂದಿರುವ ಪ್ರಕರಣವು ವಿರಳದಲ್ಲಿ ಅತಿ ವಿರಳವಾದ ಪ್ರಕರಣದ ವ್ಯಾಪ್ತಿಯೊಳಗೆ ಬರದಿದ್ದರೆ, ಆಜೀವ ಕಾರಾವಾಸ ಶಿಕ್ಷೆಯನ್ನು ವಿಧಿಸುವುದು ಅಗತ್ಯವಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಸರಿಯಾಗಿ ಗ್ರಹಿಸಿ ನಿರ್ಧರಿಸಿದೆ ಹಾಗೂ ಅವರಿಗೆ ಆಜೀವ ಕಾರಾವಾಸ ಶಿಕ್ಷೆಯನ್ನು ಹಾಗೂ ಭಾರತೀಯ ದಂಡ ಸಂಹಿತೆ, 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಪ್ರತಿಯೊಬ್ಬರಿಗೂ 10,000/- ರೂ.ಗಳ ಜುಲ್ಮಾನೆಯನ್ನು ಹಾಗೂ ಪ್ರತಿ 3 ತಿಂಗಳಿಗೊಮ್ಮೆ ಕಾರಾವಾಸ

ಶಿಕ್ಷೆಗೊಳಪಡಿಸಲು ಹಾಗೂ ಪ್ರತಿಯೊಬ್ಬರಿಗೆ 1,000/– ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಯನ್ನು ವಿಧಿಸಿದೆ.

50. ಆರೋಪಿಗಳು ಮಹಿಳೆಯರಾಗಿರುವ ಹಾಗೂ ಆರ್ಥಿಕವಾಗಿ ಹಿಂದುಳಿದಿರುವುದರ ಪರಿಗಣನೆಯಲ್ಲಿ ಜುಲ್ಮಾನೆ ಮೊತ್ತಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಕೆಲವು ರಿಯಾಯಿತಿಯನ್ನು ನೀಡಬಹುದಾಗಿದೆ. ಮಹಿಳೆಯರ ಆರ್ಥಿಕ ಹಿನ್ನೆಲೆಯನ್ನು ಪರಿಗಣನೆಗೆ ತೆಗೆದುಕೊಂಡು ಭಾರತೀಯ ದಂಡ ಸಂಹಿತೆ, 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಅಧಿವಿಚಾರಣಾ ನ್ಯಾಯಾಲಯವು ವಿಧಿಸಿದ 10,000/– ರೂ.ಗಳಿಗೆ ಬದಲಾಗಿ ಪ್ರತಿಯೊಬ್ಬರಿಗೆ 5,000/– ರೂ.ಗಳನ್ನು ವಿಧಿಸಬಹುದಾಗಿದೆ. ಭಾರತೀಯ ದಂಡ ಸಂಹಿತೆ, 448ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಜುಲ್ಮಾನೆಯ ಶಿಕ್ಷೆಯನ್ನು ಬಿಟ್ಟುಬಿಡಬಹುದಾಗಿದೆ. ತದನುಸಾರವಾಗಿ, ಅಪೀಲನ್ನು, ಜುಲ್ಮಾನೆಯಷ್ಟರಮಟ್ಟಿಗೆ ಮಾತ್ರ ಅಪೀಲನ್ನು ಭಾಗಶಃ ಪುರಸ್ಕರಿಸಬೇಕಾಗುತ್ತದೆ. ಅಧಿವಿಚಾರಣಾ ನ್ಯಾಯಾಲಯದ ಇತರ ಎಲ್ಲಾ ನಿರ್ಣಯಗಳನ್ನು ಪುಷ್ಠೀಕರಿಸಬೇಕಾಗಿದೆ.

51. ಇದರ ಪರಿಣಾಮವಾಗಿ, ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

## ಆಜ್ಞೆ

ಭಾರತೀಯ ದಂಡ ಸಂಹಿತೆ, 448ನೇ ಹಾಗೂ 302ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಎಸ್.ಸಿ. 91/08ರಲ್ಲಿ ಹೊರಡಿಸಿದ ಅಪರಾಧ ನಿರ್ಣಯದ ತೀರ್ಪನ್ನು ದೃಢಪಡಿಸಲಾಗಿದೆ. ಭಾರತೀಯ ದಂಡ ಸಂಹಿತೆ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಆಜೀವ ಕಾರಾವಾಸ ಶಿಕ್ಷೆಯನ್ನು ಹಾಗೂ ಭಾರತೀಯ ದಂಡ ಸಂಹಿತೆಯ 448ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಮೂರು ತಿಂಗಳ ಕಾರಾವಾಸ ಶಿಕ್ಷೆಯನ್ನು ಸ್ಥಿರಗೊಳಿಸಲಾಗಿದೆ. ಭಾರತೀಯ ದಂಡ ಸಂಹಿತೆ 448ನೇ ಪ್ರಕರಣದ ಮೇರೆಗೆ

ದಂಡಿಸಬಹುದಾದ ಅಪರಾಧಕ್ಕೆ 1,000/– ರೂ.ಗಳ ಜುಲ್ಮಾನೆ ವಿಧಿಸುವುದನ್ನು ತಳ್ಳಿಹಾಕಲಾಗಿದೆ. ಭಾರತೀಯ ದಂಡ ಸಂಹಿತೆ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯವು ವಿಧಿಸಿದ 10,000/– ರೂ.ಗಳ ಜುಲ್ಮಾನೆ ಮೊತ್ತಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಪ್ರತಿಯೊಬ್ಬರಿಗೂ 5,000/– ರೂ.ಗಳನ್ನು ಇಳಿಸಲಾಗಿದೆ. ಇನ್ನುಳಿದ ಅಧಿವಿಚಾರಣಾ ನ್ಯಾಯಾಲಯದ ಇತರ ಎಲ್ಲಾ ನಿರ್ಣಯಗಳನ್ನು ಸ್ಥಿರಗೊಳಿಸಲಾಗಿದೆ.

ತದನುಸಾರವಾಗಿ, ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ. ಆದಷ್ಟು ಬೇಗನೆ ಅಪೀಲುದಾರರಿಗೆ ಉಚಿತ ದರದಲ್ಲಿ ಈ ತೀರ್ಪಿನ ಪ್ರತಿಯನ್ನು ರಿಜಿಸ್ಟ್ರಿಯು ಒದಗಿಸುವುದು.